## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–** 2018–19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಅಸಂಘಟಿತ ಕಾರ್ಮಿಕರಾದ "ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ವಂತಿಗೆ ಆಧಾರಿತ ಭವಿಷ್ಯನಿಧಿ ಯೋಜನೆಯೊಂದಿಗೆ ಸ್ಮಾರ್ಟ್ ಕಾರ್ಡ್‌ನ್ನು ಒದಗಿಸುವ ಬಗ್ಗೆ ಮತ್ತು ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತಂತೆ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:–**
1) ಸರ್ಕಾರದ ಆದೇಶ ಸಂಖ್ಯೆ: ಕಾಇ 150 ಎಲ್‌ಇಟಿ 2018, ದಿನಾಂಕ: 07/12/2018.
2) ಸರ್ಕಾರದ ಆದೇಶ ಸಂಖ್ಯೆ: ಕಾಇ 287 ಎಲ್‌ಇಟಿ 2017, ದಿನಾಂಕ: 02/11/2017.
3) ಸರ್ಕಾರದ ಆದೇಶ ಸಂಖ್ಯೆ: ಕಾಇ 467 ಎಲ್‌ಇಟಿ 2017, ದಿನಾಂಕ: 24/09/2018
4) ಜಂಟಿ ಕಾರ್ಮಿಕ ಆಯುಕ್ತರು ಹಾಗೂ ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಇವರ ಪತ್ರ ಸಂಖ್ಯೆ: ಅಸಂಕಾ/ಅ.ಪ.ಯೋ/ಸಿ.ಆರ್–01/2017–18, ದಿನಾಂಕ: 10/12/2018

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ... ಬೆಂಗಳೂರು
ದಿನಾಂಕ: 03/01/19
ಸಂಖ್ಯೆ: 11324

@@@@@

**ಪ್ರಸ್ತಾವನೆ:–**

ರಾಜ್ಯದ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಅವರಿಗೆ ಆರ್ಥಿಕ ಭದ್ರತೆ, ಉತ್ಪಾದನಾ ಸಾಮರ್ಥ್ಯ ಹಾಗೂ ಉತ್ತಮ ಜೀವನಮಟ್ಟ ಒದಗಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಹಲವಾರು ಸಾಮಾಜಿಕ ಭದ್ರತಾ ಯೋಜನೆಗಳನ್ನು ಆರ್ಥಿಕವಾಗಿ ಹಿಂದುಳಿದಿರುವವರಿಗಾಗಿ ರೂಪಿಸಿ ಜಾರಿಗೊಳಿಸುತ್ತಿದೆ.

ಈ ನಿಟ್ಟಿನಲ್ಲಿ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ **2018–19ನೇ ಸಾಲಿನ** ಆಯವ್ಯಯದಲ್ಲಿ ಘೋಷಿಸಿರುವ ಆರು ಅಸಂಘಟಿತ ಕಾರ್ಮಿಕ ವರ್ಗಗಳಾದ **"ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ" "ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ"** ಯಡಿ ಸ್ಮಾರ್ಟ್ ಕಾರ್ಡ್ ವಿತರಿಸುವ ಯೋಜನೆಯನ್ನು ಜಾರಿಗೊಳಿಸಲು ಮತ್ತು ವಂತಿಗೆ ಆಧಾರಿತ ಪಿಂಚಣಿ ಯೋಜನೆಗೆ, ಕಾರ್ಮಿಕ ಸೇವಾ ಕೇಂದ್ರಗಳಿಗೆ ಅಗತ್ಯವಿರುವ ಖರ್ಚು–ವೆಚ್ಚಗಳಿಗೆ, ಕಾರ್ಮಿಕ ಬಂಧುಗಳಿಗೆ ಧನ ಸಹಾಯದ ಉದ್ದೇಶಕ್ಕಾಗಿ ಮಂಡಳಿಯ **"ಲೆಕ್ಕಶೀರ್ಷಿಕೆ 2230–01–111–0–05"** ರಡಿ ನಮೂದಿಸಲಾದ ಅನುದಾನವನ್ನು ಬಳಸಿಕೊಳ್ಳಲು ಆದೇಶಿಸಲಾಗಿದೆ.

3-1-19

ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅನುಷ್ಠಾನಗೊಳಿಸುವ ಯೋಜನೆಗಳನ್ನು ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ವಿವಿಧ ಯೋಜನೆಗಳಡಿ ಗುರುತಿಸಲ್ಪಟ್ಟ ಮತ್ತು ನೋಂದಾಯಿತ ಫಲಾನುಭವಿಗಳಿಗೆ **ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಎಂಬ ಏಕ ಶೀರ್ಷಿಕೆ ಮತ್ತು ಏಕ ಚಿಹ್ನೆಯೊಂದಿಗೆ ಸ್ಮಾರ್ಟ್ ಕಾರ್ಡ್**‌ಗಳನ್ನು ವಿತರಿಸಲು ಹಾಗೂ ಕಮಿಷನ್ ಆಧಾರದ ಮೇಲೆ ನೇಮಕಗೊಳ್ಳುವ ಕಾರ್ಮಿಕ ಬಂಧುಗಳ ಮುಖೇನ ಯೋಜನೆಯನ್ನು ಜಾರಿಗೆ ತರಲು ಆದೇಶಿಸಲಾಗಿದೆ.

ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅಸಂಘಟಿತ ಕಾರ್ಮಿಕ ವಲಯದಲ್ಲಿ ವಿಶೇಷ ಸಾಧನೆ ಮಾಡಿರುವ ಕಾರ್ಮಿಕರನ್ನು ಗುರುತಿಸಿ, ಸನ್ಮಾನಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಸಾರಿಗೆ ಕಾರ್ಮಿಕರು ಸೇರಿದಂತೆ ಒಟ್ಟು 5 ವಲಯದ ಅಸಂಘಟಿತ ಕಾರ್ಮಿಕರಿಗೆ **ಪ್ರತೀ ವರ್ಷ ಮಾರ್ಚ್ 1** ರಂದು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ **ಕಾರ್ಮಿಕ ಸಮ್ಮಾನ ದಿನ** ಆಚರಿಸಿ, **ಕಾರ್ಮಿಕರ ಸಮ್ಮಾನ ಪ್ರಶಸ್ತಿ** ಹಾಗೂ **ವಿಶೇಷ ಪುರಸ್ಕಾರ** ನೀಡಿ ಗೌರವಿಸಲು ಆದೇಶ ಹೊರಡಿಸಲಾಗಿದೆ.

**ಮಾನ್ಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಪ್ರಕರಣ ಸಂಖ್ಯೆ: 5706/30/0/2014/UC, ದಿನಾಂಕ: 02/02/2018ರ** ಆದೇಶದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 3(4)(a) ಯಿಂದ (g) ವರೆಗೆ ನಮೂದಿಸಲಾದ ಸೌಲಭ್ಯಗಳನ್ನೊಳಗೊಂಡ ಯೋಜನೆಗಳನ್ನು ರೂಪಿಸುವಂತೆ ಮತ್ತು ಸದರಿ ಕಾಯ್ದೆಯ ಕಲಂ 9 ರನ್ವಯ ರಾಜ್ಯ ಸರ್ಕಾರಗಳು ತಾಲ್ಲೂಕು ಕೇಂದ್ರಗಳಲ್ಲಿ **ಕಾರ್ಮಿಕ ಸೇವಾ ಕೇಂದ್ರ**ಗಳನ್ನು ಸ್ಥಾಪಿಸುವಂತೆ ಮತ್ತು ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಅವರ ಜೊತೆಯಲ್ಲಿ ಕೊಂಡೊಯ್ಯಬಹುದಾದ ವಿಶಿಷ್ಠ ಗುರುತಿನ ಸಂಖ್ಯೆಯುಳ್ಳ ಒಂದು ಸ್ಮಾರ್ಟ್ ಕಾರ್ಡ್‌ನ್ನು ಸಹ ನೀಡುವಂತೆ ಆದೇಶಿಸಿರುತ್ತದೆ.

ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಜಂಟಿ ಕಾರ್ಮಿಕ ಆಯುಕ್ತರು ಹಾಗೂ ಜಂಟಿ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು ಇವರ ಪ್ರಸ್ತಾವನೆಯಲ್ಲಿ ನೋಂದಾಯಿತ ಅಸಂಘಟಿತ ಕಾರ್ಮಿಕರಿಂದ ವಾರ್ಷಿಕ ತಲಾ ರೂ. 100/- ರಂತೆ ವಂತಿಗೆಯನ್ನು ಸಂಗ್ರಹಿಸಿ, ಸರ್ಕಾರದಿಂದ ವಾರ್ಷಿಕ ತಲಾ ರೂ. 200/-ಗಳ ಸಮಾನಾಂತರ ವಂತಿಗೆಯನ್ನು ಪಾವತಿಸಲು ನಿರ್ಣಯ ಕೈಗೊಳ್ಳಲಾಗಿದೆ. ಮಂಡಳಿಯಲ್ಲಿ ಜಾರಿಯಲ್ಲಿರುವ ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲು, **"ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಲೆಕ್ಕ ಶೀರ್ಷಿಕೆ: 2230-01-111-0-05"** ರಡಿ ಹಂಚಿಕೆ ಮಾಡಿರುವ **ರೂ.2956.00 ಲಕ್ಷ**ಗಳನ್ನು ಸೂಕ್ತ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳುವ ಕುರಿತು ಕರಡು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಸಲ್ಲಿಸಿರುವ ಸದರಿ ಕ್ರಿಯಾ ಯೋಜನೆಯನ್ನು 2018-19ನೇ ಸಾಲಿಗೆ ಜಾರಿಗೊಳಿಸುವುದಕ್ಕಾಗಿ ಈ ಕೆಳಕಂಡಂತೆ ಸರ್ಕಾರಿ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಾಇ 150 ಎಲ್ಇಟಿ 2018,**
**ಬೆಂಗಳೂರು ದಿನಾಂಕ: 27.12.2018**

2018-19ನೇ ಸಾಲಿನಲ್ಲಿ ಘೋಷಿಸಿರುವ **"ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಅಸಂಘಟಿತ ವಲಯದ ಕಾರ್ಮಿಕರಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ವಂತಿಗೆ ಆಧಾರಿತ ಭವಿಷ್ಯ ನಿಧಿ ಯೋಜನೆಯೊಂದಿಗೆ ಸ್ಮಾರ್ಟ್ ಕಾರ್ಡನ್ನು ಒದಗಿಸುವ ಜೊತೆಗೆ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ** ಕುರಿತಂತೆ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ಕ್ರಿಯಾ ಯೋಜನೆಗೆ ಸರ್ಕಾರವು ಅನುಮೋದನೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
27.12.2018
*(ಎಲ್.ಎಸ್. ಶ್ರೀಕಂಠಬಾಬು)*
ಸರ್ಕಾರದ ಉಪ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

**ಇವರಿಗೆ:**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಈ ಆದೇಶವನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿ ಸದರಿ ಪ್ರಕಟಣೆಯ 50 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು ಇವರಿಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿ:**

1. ಮಹಾಲೇಖಪಾಲರು, ಲೆಕ್ಕಪತ್ರ/ಲೆಕ್ಕಪರಿಶೋಧನೆ, ಕರ್ನಾಟಕ, ಬೆಂಗಳೂರು.
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬೆಂಗಳೂರು.
3. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು. (ಕಾರ್ಮಿಕ ಆಯುಕ್ತರ ಮುಖಾಂತರ)
5. ಕಾರ್ಯದರ್ಶಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.
6. ಜಂಟಿ ಕಾರ್ಯದರ್ಶಿ ಹಾಗೂ ಜಂಟಿ ಕಾರ್ಮಿಕ ಆಯುಕ್ತರು, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ಪ್ರಕರಣ ಸಂಖ್ಯೆ: ಸಿ/655/2018, ದಿ:5/12/2018)
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9).
9. ನಿರ್ದೇಶಕರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ ಅಸಂಘಟಿತ ಕಾರ್ಮಿಕರಾದ "ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ವಂತಿಕೆ ಆಧಾರಿತ ಭವಿಷ್ಯನಿಧಿ ಯೋಜನೆಯೊಂದಿಗೆ ಸ್ಮಾರ್ಟ್ ಕಾರ್ಡ್‌ನ್ನು ಒದಗಿಸುವ ಬಗ್ಗೆ ಮತ್ತು ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಕ್ರಿಯಾ ಯೋಜನೆ**

ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಮೂಲಕ ಅವರಿಗೆ ಆರ್ಥಿಕ ಭದ್ರತೆ, ಉತ್ಪಾದನಾ ಸಾಮರ್ಥ್ಯ ಹಾಗೂ ಉತ್ತಮ ಜೀವನಮಟ್ಟ ಒದಗಿಸುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯವಾಗಿದೆ. ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಂತೆ ಮಾಡುವಲ್ಲಿ ಸಾಮಾಜಿಕ ಭದ್ರತೆ ಎಂಬುದು ಅವರ ಆಶಾಕಿರಣವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಆರ್ಥಿಕವಾಗಿ ಹಿಂದುಳಿದಿರುವವರಿಗಾಗಿ ಹಲವಾರು ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ.

2017-18ನೇ ಸಾಲಿನ ಆಯವ್ಯಯದಲ್ಲಿ ಅಸಂಘಟಿತ ಕಾರ್ಮಿಕರಾದ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು ಹಾಗೂ ಮೆಕ್ಯಾನಿಕ್‌ಗಳನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ಒದಗಿಸುವ ಮೂಲಕ ಭವಿಷ್ಯನಿಧಿ ಯೋಜನೆಯನ್ನು ಜಾರಿಗೆ ತರುವುದಾಗಿ ಘೋಷಿಸಲಾಗಿದೆ.

ಮುಂದುವರೆದು, ಸನ್ಮಾನ್ಯ ಮುಖ್ಯಮಂತ್ರಿಯವರು 2018-19ನೇ ಸಾಲಿನ ಆಯವ್ಯಯದಲ್ಲಿ "ಅಸಂಘಟಿತ ಕಾರ್ಮಿಕರಲ್ಲಿ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೂ ಸಹ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಸ್ಮಾರ್ಟ್ ಕಾರ್ಡ್ ಅನ್ನು ವಿತರಿಸುವ ಜೊತೆಗೆ ವಂತಿಕೆ ಆಧಾರಿತ ಪಿಂಚಣಿ ಯೋಜನೆಯನ್ನು 25 ಕೋಟಿ ರೂ.ಗಳ ವೆಚ್ಚದಲ್ಲಿ ಜಾರಿಗೊಳಿಸಲಾಗುವುದು" ಎಂದು ಘೋಷಿಸಿರುತ್ತಾರೆ.

**I. ಯೋಜನೆಗೆ ಆಯವ್ಯಯ:-**

ಸದರಿ ಘೋಷಣೆಯ ಆಧಾರದ ಮೇಲೆ ಕರ್ನಾಟಕ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಆಡಳಿತಾತ್ಮಕ ಉದ್ದೇಶಕ್ಕಾಗಿ ಹಾಗೂ ಸರ್ಕಾರದಿಂದ ವಹಿಸಲ್ಪಟ್ಟ ವಿವಿಧ ಯೋಜನೆಗಳ ಜಾರಿಯನ್ನು ಒಳಗೊಂಡಂತೆ 2018-19ನೇ ಸಾಲಿಗೆ "ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಲೆಕ್ಕ ಶೀರ್ಷಿಕೆ: 2230-01-111-0-05"ಯಡಿ ಒಟ್ಟು ರೂ.2956.00 ಲಕ್ಷಗಳನ್ನು ಹಂಚಿಕೆ ಮಾಡಿರುತ್ತದೆ.

ಮುಂದುವರೆದು, ಸರ್ಕಾರವು ತನ್ನ ಆದೇಶ ಸಂಖ್ಯೆ:ಕಾಇ 150 ಎಲ್‌ಇಟಿ 2018, ದಿನಾಂಕ: 07-12-2018ರನ್ವಯ, ಮೇಲ್ಕಂಡ 6 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ವಂತಿಕೆ ಆಧಾರಿತ ಭವಿಷ್ಯನಿಧಿ ಯೋಜನೆಯೊಂದಿಗೆ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಸ್ಮಾರ್ಟ್ ಕಾರ್ಡ್‌ನ್ನು ಒದಗಿಸುವ ಬಗ್ಗೆ ಮತ್ತು ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವ ಕುರಿತು ಆದೇಶ ಹೊರಡಿಸಿದೆ.

ಸದರಿ ಆದೇಶದಲ್ಲಿ, "**ಆರು ಅಸಂಘಟಿತ ಕಾರ್ಮಿಕ ವರ್ಗಗಳಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ಅಂಬೇಡ್ಕರ್ ಕಾರ್ಮಿಕ ಸಹಾಯಕ ಹಸ್ತ ಯೋಜನೆಯಡಿ** ಸ್ಮಾರ್ಟ್ ಕಾರ್ಡ್‌ನ್ನು ವಿತರಿಸುವ ಜೊತೆಗೆ ವಂತಿಗೆ ಆಧಾರಿತ ಪಿಂಚಣಿ ಯೋಜನೆಯನ್ನು "**ಅಸಂಘಟಿತ ಕಾರ್ಮಿಕರಾದ ಹಮಾಲಿಗಳು, ಚಿಂದಿ ಆಯುವವರು, ಗೃಹ ಕೆಲಸಗಾರರು, ದರ್ಜಿಗಳು ಮತ್ತು ಮೆಕಾನಿಕ್ಸ್** ವರ್ಗದವರಿಗೂ "ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ"ಯ

—

"ಲೆಕ್ಕ ಶೀರ್ಷಿಕೆ: 2230-01-111-0-05"ಯಡಿ ಸರ್ಕಾರವು ಮಾಡಿದ ಹಂಚಿಕೆ ರೂ. 2956.00 ಗಳನ್ನು ಈ ಕೆಳಕಂಡ ಉದ್ದೇಶಕ್ಕೆ ಬಳಸಿಕೊಳ್ಳಲು ಮಂಜೂರಾತಿ ನೀಡಿದೆ" ಎಂದು ಆದೇಶಿಸಿದೆ.

| ಕ್ರ.ಸಂ. | ಉದ್ದೇಶ | ಅನುದಾನ ಹಂಚಿಕೆ (ರೂ. ಲಕ್ಷಗಳಲ್ಲಿ) |
|---|---|---|
| 1. | ಆರು ಅಸಂಘಟಿತ ಕಾರ್ಮಿಕ ವರ್ಗದವರ ಪೈಕಿ ಸುಮಾರು 4.5 ಲಕ್ಷ ಕಾರ್ಮಿಕರಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ಒದಗಿಸುವುದು. ಗಣತಿ (ಸಮೀಕ್ಷೆ) ಅರ್ಜಿ ನಮೂನೆಗಳ ಮುದ್ರಣ, ವೆಬ್ ಪೋರ್ಟಲ್‌ಗಳ ಸ್ಥಾಪನೆ ಮತ್ತು ನಿರ್ವಹಣೆ ಮತ್ತು ಆನ್‌ಲೈನ್ ನೋಂದಣಿಗಾಗಿ ವೆಬ್ ಅಪ್ಲಿಕೇಶನ್ ಮತ್ತು ಸೌಲಭ್ಯಗಳ ನಿರ್ವಹಣೆಯ ಉದ್ದೇಶಕ್ಕಾಗಿ, | 400.45 |
| 2. | 2017-18ರಿಂದ ನೊಂದಾಯಿತರಾದ ಸುಮಾರು 7 ಲಕ್ಷ ಅಸಂಘಟಿತ ಕಾರ್ಮಿಕ ವರ್ಗದವರಾದ *ಹಮಾಲರು, ಚಿಂದಿ ಆಯುವವರು, ಮನೆಗೆಲಸದವರು, ಟೈಲರ್‌ಗಳು ಹಾಗೂ ಮೆಕ್ಯಾನಿಕ್ ವರ್ಗದವರಿಗೆ ಭವಿಷ್ಯನಿಧಿ ಮತ್ತು ವಂತಿಗೆ ಆಧಾರಿತ ಪಿಂಚಣಿ ಸೌಲಭ್ಯ ಒದಗಿಸುವುದು* ಮತ್ತು ಇನ್ನು ಮುಂದೆ ನೋಂದಾಯಿಸಿಕೊಳ್ಳಬಹುದಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ರಾಜ್ಯ ಸರ್ಕಾರದಿಂದ ವಾರ್ಷಿಕ ರೂ. 200ರಂತೆ ಮತ್ತು ಕಾರ್ಮಿಕರಿಂದ ವಾರ್ಷಿಕ ವಂತಿಗೆ ರೂ. 100ರಂತೆ ವಂತಿಗೆಯನ್ನು ನೀಡುವುದು ಹಾಗೂ ಕರ್ನಾಟಕ ರಾಜ್ಯ ಅಸಂಘಟಿತ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಪಿಂಚಣಿ ಸೌಲಭ್ಯದೊಂದಿಗೆ ವಂತಿಗೆ ಆಧಾರಿತ ಪಿಂಚಣಿಯ ನಿಧಿಯನ್ನು ನಿರ್ವಹಿಸಲು ಮತ್ತು ಸೂಕ್ತವಾದ ಯೋಜನೆಯನ್ನು ರೂಪಿಸುವ ಉದ್ದೇಶಕ್ಕಾಗಿ, | 1,400.00 |
| 3. | ಪ್ರತೀ ಸೇವಾ ಕೇಂದ್ರಗಳಿಗಾಗಿ ವಾರ್ಷಿಕ *ರೂ. 3.27 ಲಕ್ಷ ವೆಚ್ಚದಲ್ಲಿ* 175 ಕಾರ್ಮಿಕರ ಅರಿವು ಮೂಡಿಸುವ ಮತ್ತು ಕಾರ್ಮಿಕ ಸೇವಾ ಕೇಂದ್ರಗಳನ್ನು ತಾಲ್ಲೂಕುಗಳಲ್ಲಿ ಸ್ಥಾಪಿಸುವುದು. ಬಾಡಿಗೆಯ ಆಧಾರದ ಮೇಲೆ ಕಛೇರಿಗಾಗಿ ಸ್ಥಳಾವಕಾಶ, ಕಛೇರಿಯ ಪೀಠೋಪಕರಣಗಳು, ಕಛೇರಿಯ ಖರ್ಚು, ಕಾರ್ಯಕ್ರಮಗಳ ವೆಚ್ಚ ಮತ್ತು ಇತರೆ ಚಟುವಟಿಕೆಗಳ ಉದ್ದೇಶಕ್ಕಾಗಿ, | *572.25* |
| 4. | ನೋಂದಣಿಗಾಗಿ ಮತ್ತು ಭವಿಷ್ಯನಿಧಿ ವಂತಿಗೆಯನ್ನು ಸಂಗ್ರಹಿಸಲು ಹಾಗೂ ಇತರೆ ಸೇವೆಗಳನ್ನು ನಿಯಮಾನುಸಾರ ಒದಗಿಸಲು ಕಾರ್ಮಿಕ ಬಂಧುಗಳಿಗೆ ಪ್ರೋತ್ಸಾಹ ಧನ ನೀಡುವ ಉದ್ದೇಶಕ್ಕಾಗಿ (ಮಾನ್ಯ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ:516/2018, ದಿನಾಂಕ: 06-09-2018ರಲ್ಲಿ ಅನುಮೋದಿಸಿದೆ) | 135.00 |
| | ಒಟ್ಟು ಮೊತ್ತ | 2507.70 |

—

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮಂಡಳಿಯು ಉದ್ದೇಶವಾರು ಕ್ರಿಯಾ ಯೋಜನೆಯನ್ನು ಈ ಕೆಳಕಂಡಂತೆ ರೂಪಿಸಿದೆ.

**(1) ಅಸಂಘಟಿತ ವಲಯದ ಕಾರ್ಮಿಕರನ್ನು ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡುವುದು.**

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2009ರ ಕಲಂ 10(3)ರನ್ವಯ, ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ, ವಿಶಿಷ್ಟ ಗುರುತಿನ ಸಂಖ್ಯೆಯುಳ್ಳ ಸ್ಮಾರ್ಟ್ ಕಾರ್ಡ್‌ನ್ನು ನೀಡಬೇಕಾಗಿದ್ದು, ಮಾನ್ಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಪ್ರಕರಣ ಸಂಖ್ಯೆ: 5706/30/0/2014/UC, ದಿನಾಂಕ:02-02-2018ರಲ್ಲಿ ನೀಡಿರುವ ಆದೇಶದಂತೆ ಕೂಡ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್‌ನ್ನು ನೀಡಬೇಕಾಗಿದೆ.

ಸರ್ಕಾರವು ತನ್ನ ಆದೇಶದಲ್ಲಿ ಈ ಉದ್ದೇಶಕ್ಕಾಗಿ **ರೂ.400.45 ಲಕ್ಷಗಳನ್ನು** ಮೀಸಲಾಗಿರಿಸಿದ್ದು, ಸದರಿ ಉದ್ದೇಶದ ಕಾರ್ಯ ಸಾಧನೆಗಾಗಿ ಈ ಕೆಳಕಂಡಂತೆ ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

| ಉದ್ದೇಶ | ವಿವರಣೆ | ಪ್ರಮಾಣದ ಸಂಖ್ಯೆ | ಅಂದಾಜು ದರ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|---|---|
| 4.5 ಲಕ್ಷ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡುವುದು ಮತ್ತು ಆನ್‌ಲೈನ್ ನೋಂದಣಿ ಮತ್ತು ಪಾವತಿ ಪೋರ್ಟಲ್. | ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಬೆಂಗಳೂರು ಪ್ರಾದೇಶಿಕದಲ್ಲಿ 2 ಲಕ್ಷ ಅಸಂಘಟಿತ ಕಾರ್ಮಿಕರನ್ನು ಗುರುತಿಸುವುದು, ಡಾಟಾ ಎಂಟ್ರಿ ಹಾಗೂ ಜಿಯೋ ಲೊಕೇಷನ್ ಸಮೇತ ಸ್ಮಾರ್ಟ್ ಕಾರ್ಡ್ ಮುದ್ರಿಸುವುದು. | 200000 | 60 | 1,20,00,000 |
| | ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಕಲಬುರ್ಗಿ ಪ್ರಾದೇಶಿಕದಲ್ಲಿ 75,000 ಅಸಂಘಟಿತ ಕಾರ್ಮಿಕರನ್ನು ಗುರುತಿಸುವುದು, ಡಾಟಾ ಎಂಟ್ರಿ ಹಾಗೂ ಜಿಯೋ ಲೊಕೇಷನ್ ಸಮೇತ ಸ್ಮಾರ್ಟ್ ಕಾರ್ಡ್ ಮುದ್ರಿಸುವುದು. | 75000 | 60 | 45,00,000 |
| | ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಮೈಸೂರು ಪ್ರಾದೇಶಿಕದಲ್ಲಿ 75,000 ಅಸಂಘಟಿತ ಕಾರ್ಮಿಕರನ್ನು ಗುರುತಿಸುವುದು, ಡಾಟಾ ಎಂಟ್ರಿ ಹಾಗೂ ಜಿಯೋ ಲೊಕೇಷನ್ ಸಮೇತ ಸ್ಮಾರ್ಟ್ ಕಾರ್ಡ್ ಮುದ್ರಿಸುವುದು. | 75000 | 60 | 45,00,000 |
| | ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಬೆಳಗಾವಿ ಪ್ರಾದೇಶಿಕದಲ್ಲಿ 1,00,000 ಅಸಂಘಟಿತ ಕಾರ್ಮಿಕರನ್ನು ಗುರುತಿಸುವುದು, ಡಾಟಾ ಎಂಟ್ರಿ ಹಾಗೂ ಜಿಯೋ ಲೊಕೇಷನ್ ಸಮೇತ ಸ್ಮಾರ್ಟ್ ಕಾರ್ಡ್ ಮುದ್ರಿಸುವುದು. | 1,00,000 | 60 | 60,00,000 |
| | ಎಲ್ಲಾ ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಿರೀಕ್ಷಕರಿಗೆ ಸ್ಮಾರ್ಟ್ ಕಾರ್ಡ್ ರೀಡರ್ ಮತ್ತು ರೈಟರ್‌ಗಳನ್ನು ಹಾಗೂ ತರಬೇತಿ ಉದ್ದೇಶಕ್ಕಾಗಿ 5 ಸ್ಮಾರ್ಟ್ ಕಾರ್ಡ್ ರೀಡರ್‌ಗಳನ್ನು ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಒದಗಿಸುವುದು. | 233 | 3,600 | 8,38,800 |
| | ಕಾರ್ಮಿಕ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆಗಳು ಹಾಗೂ ಚಟುವಟಿಕೆಗಳ ಕುರಿತು ಮತ್ತು ಸುರಕ್ಷತೆ ಕುರಿತ ಮಾಹಿತಿಗಳುಳ್ಳ 4.5 ಲಕ್ಷ ಪಾಕೆಟ್ ಕ್ಯಾಲೆಂಡರ್‌ಗಳನ್ನು ಮೆ॥ MC&A ಸಂಸ್ಥೆಯ ಮೂಲಕ ಮುದ್ರಿಸುವುದು. | 4,50,000 | 8 | 36,00,000 |
| | ಅಸಂಘಟಿತ ಕಾರ್ಮಿಕರ ನೋಂದಣಿಗಾಗಿ 4.5 ಲಕ್ಷ | 4,50,000 | 2 | 9,00,000 |

| | | | | |
|---|---|---|---|---|
| | ನಿಗದಿತ ಅರ್ಜಿ ನಮೂನೆಗಳ ಮುದ್ರಣ ವೆಚ್ಚ. | | | |
| | ಕ.ರಾ.ಅ.ಕಾ.ಸಾ.ಭ. ಮಂಡಳಿಯ ಯೋಜನೆಯ ಕರಪತ್ರಗಳನ್ನು ಮುದ್ರಣ ವೆಚ್ಚ. | 4,50,000 | 5 | 22,50,000 |
| | ಆನ್‌ಲೈನ್ ಪೋರ್ಟಲ್, ನೋಂದಣಿ ಹಾಗೂ ಡಾಟಾ ಎಂಟ್ರಿ ತಂತ್ರಜ್ಞಾನ, ವೆಬ್ ಅಪ್ಲಿಕೇಷನ್, ಅಸಂಘಟಿತ ಕಾರ್ಮಿಕರ ಆನ್‌ಲೈನ್ ನೋಂದಣಿಗಾಗಿ ಆಂಡ್ರಾಯ್ಡ್ ಅಪ್ಲಿಕೇಷನ್, ಕ್ಲೇಮ್ ನೋಂದಣಿ, ಉದ್ಯೋಗ ಹುಡುಕುವುದು, GIS, Payment Gateway ಮತ್ತು 1 ವರ್ಷಕ್ಕಾಗಿ ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ನಿರ್ವಹಣೆ. | 1 | 47,00,000 | 47,00,000 |
| | ಒಟ್ಟು ಮೊತ್ತ | | | 3,92,88,800 |

1. ಪ್ರಸಕ್ತ ಸಾಲಿನಲ್ಲಿ ಉದ್ದೇಶಿತ 4.5 ಲಕ್ಷ ಅಸಂಘಟಿತ ಕಾರ್ಮಿಕರಾದ ಅಗಸರು, ಕ್ಷೌರಿಕರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು ಹಾಗೂ ಭಟ್ಟಿ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡುವ ಪ್ರಕ್ರಿಯೆಯನ್ನು ರಾಜ್ಯದ 4 ವಿಭಾಗಗಳಿಗೆ ಹಂಚಿಕೆ ಮಾಡಲಾಗಿದ್ದು, ಮೆ॥ ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ಟೆಂಡರ್ ಮೂಲಕ ಪ್ರತ್ಯೇಕ ಸಂಸ್ಥೆಗಳನ್ನು ವಿಭಾಗವಾರು ಆಯ್ಕೆ ಮಾಡಿ ಸ್ಮಾರ್ಟ್ ಕಾರ್ಡ್ ನೀಡಲಾಗುತ್ತದೆ.
2. ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕ ಅಧಿಕಾರಿಗಳನ್ನು ಈ ಉದ್ದೇಶಕ್ಕಾಗಿ ನೋಂದಣಾಧಿಕಾರಿಗಳನ್ನಾಗಿ ಅಧಿಸೂಚಿಸಲಾಗುವುದು.
3. ನೋಂದಣಿಗಾಗಿ ಸ್ವಯಂಘೋಷಿತ ಅರ್ಜಿಗಳನ್ನು ಮಂಡಳಿಯಿಂದ ಮುದ್ರಿಸಲು ಕ್ರಮಕೈಗೊಳ್ಳಲಾಗಿದೆ **(ನಮೂನೆ ಲಗತ್ತಿಸಿದೆ).**
4. ಸದರಿ ಅರ್ಜಿಗಳನ್ನು ನಿಗದಿಪಡಿಸಿದ ವಲಯದ ಕಾರ್ಮಿಕ ಸಂಘಗಳು, ಸಂಘಟನೆಗಳು, ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ಹಾಗೂ ನೇರವಾಗಿ ಉದ್ದೇಶಿತ ಕಾರ್ಮಿಕರಿಗೆ ವಿತರಿಸಲಾಗುವುದು.
5. ಭರ್ತಿ ಮಾಡಿದ ಅರ್ಜಿಗಳನ್ನು ನೋಂದಣಾಧಿಕಾರಿಗಳ ಮುಖಾಂತರ ಮೆ॥ ಕಿಯೋನಿಕ್ಸ್ ಸಂಸ್ಥೆಯಿಂದ ನಿಯೋಜಿಸಲ್ಪಟ್ಟ ನೋಂದಣಿ ಸಂಸ್ಥೆಗೆ ಸ್ಮಾರ್ಟ್ ಕಾರ್ಡ್ ಮುದ್ರಣಕ್ಕಾಗಿ ನೀಡಲಾಗುವುದು.
6. ಮುದ್ರಿಸಲ್ಪಟ್ಟ ಸ್ಮಾರ್ಟ್ ಕಾರ್ಡ್‌ಗಳನ್ನು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ (ಕರ್ನಾಟಕ) ನಿಯಮಾವಳಿ, 2009ರ ಪ್ರಾವಧಾನಗಳನ್ವಯ ನಿಗದಿಪಡಿಸಿದ ಶುಲ್ಕ ರೂ.25/-ಗಳನ್ನು ಪಡೆದು ಸಂಬಂಧಪಟ್ಟ ಫಲಾನುಭವಿಗೆ ಇಲಾಖೆಯ ಅಧಿಕಾರಿಗಳ ಮೂಲಕ ವಿತರಿಸಲಾಗುವುದು.
7. **ಪ್ರಚಾರ:** ಯೋಜನೆಯ ಕುರಿತು ಫಲಾನುಭವಿಗಳಲ್ಲಿ ಅರಿವು ಮೂಡಿಸಲು ಕಾರ್ಮಿಕ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆಗಳು ಹಾಗೂ ಚಟುವಟಿಕೆಗಳ ಕುರಿತು ಮತ್ತು ಸುರಕ್ಷತೆ ಕುರಿತ ಮಾಹಿತಿಗಳುಳ್ಳ 4.5 ಲಕ್ಷ ಪಾಕೆಟ್ ಕ್ಯಾಲೆಂಡರ್‌ಗಳನ್ನು ಮೆ॥ MC&A ಸಂಸ್ಥೆಯ ಮೂಲಕ ಮುದ್ರಿಸಿ ಹಂಚಲಾಗುವುದು.
8. ಮಂಡಳಿಯ ಯೋಜನೆಯ ಮಾಹಿತಿ ಹೊಂದಿರುವ ಕರಪತ್ರಗಳನ್ನು ಮುದ್ರಿಸಿ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಕಛೇರಿ ಹಾಗೂ ಕಾರ್ಮಿಕ ಸೇವಾ ಕೇಂದ್ರಗಳಲ್ಲಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಆಯ್ಕೆ ಮಾಡಲ್ಪಟ್ಟ ಕಾರ್ಮಿಕ ಬಂಧುಗಳ ಮುಖಾಂತರ ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳಲಾಗುವುದು ಹಾಗೂ ನೋಂದಣಿಯಲ್ಲಿ ಸಹಾಯ ನೀಡಿದ ಕಾರ್ಮಿಕ ಬಂಧುಗಳಿಗೆ ತಲಾ ರೂ. 20 ರ ದರದಲ್ಲಿ ಕಮಿಷನ್ ನೀಡಲಾಗುವುದು. ಕಮಿಷನ್ ಪಡೆಯಲು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ನೀಡಬೇಕಾಗಿರುತ್ತದೆ **(ನಮೂನೆ ಲಗತ್ತಿಸಿದೆ).**

9. ತಾಂತ್ರಿಕ ಅಭಿವೃದ್ಧಿ: ಕಾರ್ಮಿಕ ಇಲಾಖೆಯ ಎಲ್ಲಾ ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಿರೀಕ್ಷಕರುಗಳಿಗೆ ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಸ್ಮಾರ್ಟ್ ಕಾರ್ಡ್ ರೀಡರ್ ಮತ್ತು ರೈಟರ್‌ಗಳನ್ನು ಒದಗಿಸಲಾಗುವುದು.

ಮೆ॥ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಆನ್‌ಲೈನ್ ಪೋರ್ಟಲ್, ನೋಂದಣಿ ಹಾಗೂ ಡಾಟಾ ಎಂಟ್ರಿ ತಂತ್ರಜ್ಞಾನ, ವೆಬ್ ಅಪ್ಲಿಕೇಷನ್, ಅಸಂಘಟಿತ ಕಾರ್ಮಿಕರ ಆನ್‌ಲೈನ್ ನೋಂದಣಿಗಾಗಿ ಆಂಡ್ರಾಯ್ಡ್ ಅಪ್ಲಿಕೇಷನ್, ಕ್ಲೇಮ್ ನೋಂದಣಿ, ಉದ್ಯೋಗ ಹುಡುಕುವುದು, GIS, Payment Gateway ವ್ಯವಸ್ಥೆ ಮಾಡಲಾಗುವುದು.

ಎಲ್.ಎಸ್. ಶ್ರೀಕಂಠಬಾಬು
ಸರ್ಕಾರದ ಉಪಕಾರ್ಯದರ್ಶಿ
ಕಾರ್ಮಿಕ ಇಲಾಖೆ

**(2) ನೋಂದಣಿ ಮತ್ತು ಭವಿಷ್ಯನಿಧಿ ವಂತಿಕೆಯ ಸಂಗ್ರಹದ ಕುರಿತು-ಕಾರ್ಮಿಕ ಬಂಧುಗಳಿಗೆ ಕಮಿಷನ್**

ಅಸಂಘಟಿತ ವಲಯದ ಬಹುತೇಕ ಕಾರ್ಮಿಕರು ಗ್ರಾಮೀಣ ಭಾಗದಲ್ಲಿ ನೆಲೆಸಿದ್ದು, ಅವಿದ್ಯಾವಂತರು ಹಾಗೂ ಬಡತನ ರೇಖೆಗಿಂತ ಕೆಳಹಂತದಲ್ಲಿ ಇರುತ್ತಾರೆ ಹಾಗೂ ಸಾಮಾಜಿಕ ಭದ್ರತೆಯಿಂದ ವಂಚಿತರಾಗಿರುತ್ತಾರೆ. ನಿಗದಿತ ವಲಯದ ಎಲ್ಲಾ ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಬೇಕಾಗಿರುತ್ತದೆ.

ಆದ್ದರಿಂದ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಇತ್ತೀಚೆಗೆ ಜಾರಿ ಮಾಡುತ್ತಿರುವ ಯೋಜನೆಗಳ ಸೌಲಭ್ಯಗಳ ಮಾಹಿತಿ ಹಾಗೂ ಅವುಗಳನ್ನು ಒದಗಿಸಲು ಪಂಚಾಯಿತಿ ಮತ್ತು ವಾರ್ಡ್ ಮಟ್ಟದಲ್ಲಿ ಕಾರ್ಮಿಕ ಬಂಧುಗಳನ್ನು ನೇಮಕ ಮಾಡಿಕೊಂಡಿರುತ್ತದೆ.

ಮೇಲ್ಕಂಡಂತೆ ನೇಮಕಗೊಂಡ ಕಾರ್ಮಿಕ ಬಂಧುಗಳು ಸ್ಥಳೀಯರಾಗಿದ್ದು, ತಾವು ಕಾರ್ಯನಿರ್ವಹಿಸುತ್ತಿರುವ ಪ್ರದೇಶದ ಸಂಪೂರ್ಣ ಪರಿಜ್ಞಾನ ಇರುವ ಕಾರಣ ಅವರ ಸೇವೆಯನ್ನು ಬಳಸಿಕೊಳ್ಳುವುದು ಸೂಕ್ತವಾಗಿರುತ್ತದೆ. ಇದರಿಂದ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸಲು ಸಾಧ್ಯವಾಗುತ್ತದೆ ಹಾಗೂ ಯೋಜನೆಯ ಉದ್ದೇಶವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಾಗುತ್ತದೆ.

ಅಂತಹ ಕಾರ್ಮಿಕ ಬಂಧುಗಳಿಗೆ ನೋಂದಣಿಯ ಸಹಾಯಕ್ಕಾಗಿ ಅಂದರೆ, ನಿಗದಿತ ಅರ್ಜಿ ನಮೂನೆಗಳನ್ನು ಭರ್ತಿ ಮಾಡಿ ನೋಂದಾಣಾಧಿಕಾರಿಗಳಿಗೆ ತಲುಪಿಸುವುದು, ಮುದ್ರಿಸಲ್ಪಟ್ಟ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸುವುದು, ಯೋಜನೆಗಳಡಿ ಸೌಲಭ್ಯಗಳನ್ನು ಪಡೆಯಲು ಸಹಾಯ ನೀಡುವುದು ಇವೇ ಮುಂತಾದ ಕಾರ್ಯಗಳ ನಿರ್ವಹಣೆಗಾಗಿ ಯೋಜನೆಯಡಿ ಕಮಿಷನ್ ನೀಡಲಾಗುವುದು.

ಅದೇ ರೀತಿ, ಭವಿಷ್ಯನಿಧಿಯ ವಾರ್ಷಿಕ ವಂತಿಕೆ ಸಂಗ್ರಹ ಹಾಗೂ ಠೇವಣಿಗಾಗಿ ಸಹ ಅವರಿಗೆ ತಲಾ ರೂ.5 ರ ದರದಲ್ಲಿ ಕಮಿಷನ್ ನೀಡಲಾಗುವುದು. ಕಮಿಷನ್ ಪಡೆಯಲು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. **(ನಮೂನೆ ಲಗತ್ತಿಸಿದೆ)**

ಮೇಲ್ಕಂಡ ಉದ್ದೇಶಗಳಿಗಾಗಿ ಈ ಯೋಜನೆಯಡಿ ಹಂಚಿಕೆ ಮಾಡಲ್ಪಟ್ಟ ಅನುದಾನದಲ್ಲಿ ರೂ.135 ಲಕ್ಷಗಳನ್ನು ಕೆಳಕಂಡಂತೆ ಬಳಸಿಕೊಳ್ಳಲು ಅಂದಾಜಿಸಲಾಗಿದೆ.

| ಉದ್ದೇಶ | ವಿವರಣೆ | ಪ್ರಮಾಣದ ಸಂಖ್ಯೆ | ಅಂದಾಜು ದರ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|---|---|
| ನೋಂದಣಿ ಮತ್ತು ಭವಿಷ್ಯನಿಧಿ ವಂತಿಕೆಯ ಸಂಗ್ರಹದ ಕುರಿತು ಕಾರ್ಮಿಕ ಬಂಧುಗಳಿಗೆ ಕಮಿಷನ್. | ನೋಂದಣಿಯ ಸಹಾಯಕ್ಕಾಗಿ ಕಾರ್ಮಿಕ ಬಂಧುಗಳಿಗೆ ತಲಾ ರೂ.20 ರ ದರದಲ್ಲಿ ಕಮಿಷನ್ | 4,50,000 | 20 | 90,00,000 |
| | ಭವಿಷ್ಯನಿಧಿಯ ವಾರ್ಷಿಕ ವಂತಿಕೆ ಸಂಗ್ರಹ ಮತ್ತು ಠೇವಣಿಗಾಗಿ ಕಾರ್ಮಿಕ ಬಂಧುಗಳಿಗೆ ತಲಾ ರೂ.5 ರ ದರದಲ್ಲಿ ಕಮಿಷನ್ | 7,00,000 | 5 | 35,00,000 |
| **ಒಟ್ಟು ಮೊತ್ತ** | | | | **1,25,00,000** |

### (3) 7 ಲಕ್ಷ ಅಸಂಘಟಿತ ಕಾರ್ಮಿಕರಿಗೆ ವಂತಿಕೆ ಆಧಾರಿತ ಭವಿಷ್ಯನಿಧಿ ಸೌಲಭ್ಯ

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 3(4) (ಎ) ಯನ್ವಯ, ಕಾಲ-ಕಾಲಕ್ಕೆ ರಾಜ್ಯ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಭವಿಷ್ಯನಿಧಿ ಒಳಗೊಂಡಂತೆ ಕಲ್ಯಾಣ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಬೇಕಾಗಿದೆ.

2017-18ನೇ ಸಾಲಿನಲ್ಲಿ 5 ವರ್ಗಗಳ ಅಸಂಘಟಿತ ಕಾರ್ಮಿಕರಾದ ಹಮಾಲರು, ಚಿಂದಿ ಆಯುವವರು, ಗೃಹ ಕಾರ್ಮಿಕರು, ಟೈಲರ್‌ಗಳು ಹಾಗೂ ಮೆಕ್ಯಾನಿಕ್‌ಗಳಿಗೆ ಸಂಬಂಧಿಸಿದಂತೆ ಸುಮಾರು 2.5 ಲಕ್ಷ ಕಾರ್ಮಿಕರಿಗೆ ಭವಿಷ್ಯನಿಧಿ ಸೌಲಭ್ಯ ಒದಗಿಸಲು ಘೋಷಿಸಲಾಗಿದೆ. ಅದೇ ರೀತಿ, 2018-19ನೇ ಸಾಲಿನಲ್ಲಿ 6 ವರ್ಗಗಳ ಅಸಂಘಟಿತ ಕಾರ್ಮಿಕರಾದ ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕರಿಗೆ ಭವಿಷ್ಯನಿಧಿ ಸೌಲಭ್ಯ ಒದಗಿಸಲು ಘೋಷಿಸಲಾಗಿದೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ಮೇಲಿನ 11 ವಲಯಗಳ ಒಟ್ಟು 7 ಲಕ್ಷ ಅಸಂಘಟಿತ ಕಾರ್ಮಿಕರಿಗೆ ರೂ. 1400 ಲಕ್ಷಗಳ ಅಂದಾಜು ವೆಚ್ಚದಲ್ಲಿ ಈ ಕೆಳಕಂಡಂತೆ ವಂತಿಕೆ ಆಧಾರಿತ ಭವಿಷ್ಯನಿಧಿ ಸೌಲಭ್ಯ ಒದಗಿಸಲು ಉದ್ದೇಶಿಸಿದೆ.

| ಉದ್ದೇಶ | ವಿವರಣೆ | ಪ್ರಮಾಣದ ಸಂಖ್ಯೆ | ಅಂದಾಜು ದರ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|---|---|
| 7 ಲಕ್ಷ ಅಸಂಘಟಿತ ಕಾರ್ಮಿಕರಿಗೆ ವಂತಿಕೆ ಆಧಾರಿತ ಭವಿಷ್ಯನಿಧಿ ಸೌಲಭ್ಯ | ನೋಂದಾಯಿತ ಅಸಂಘಟಿತ ಕಾರ್ಮಿಕರಿಗೆ ವಾರ್ಷಿಕ ತಲಾ ರೂ.200 ರಂತೆ ಸರ್ಕಾರದಿಂದ ಸಮಾನಾಂತರ ವಂತಿಕೆ ಪಾವತಿ | 7,00,000 | 200 | 14,00,00,000 |

ವಂತಿಗೆ ಆಧಾರಿತ ಭವಿಷ್ಯನಿಧಿ ಸೌಲಭ್ಯದ ಯೋಜನೆಯಲ್ಲಿ ಫಲಾನುಭವಿ ಕಾರ್ಮಿಕರು ವಾರ್ಷಿಕ ರೂ.100 ರಂತೆ ಪಾವತಿಸಲು ಹಾಗೂ ರಾಜ್ಯ ಸರ್ಕಾರದ ವತಿಯಿಂದ ವಾರ್ಷಿಕ ರೂ.200 ರಂತೆ ಸಮಾನಾಂತರ ವಂತಿಕೆಯನ್ನು ಪಾವತಿಸಲು ಉದ್ದೇಶಿಸಲಾಗಿದೆ.

ಈ ಉದೇಶಕ್ಕಾಗಿ ಭವಿಷ್ಯನಿಧಿ ಸೌಲಭ್ಯದ ನಿಧಿಯನ್ನು ತೆರೆಯಲಾಗುತ್ತಿದ್ದು, ಸಂಗ್ರಹಿಸಲ್ಪಟ್ಟ ವಂತಿಕೆಯನ್ನು ಠೇವಣಿ ಮಾಡಲಾಗುತ್ತದೆ. 18 ರಿಂದ 55 ವರ್ಷಗಳ ವಯೋಮಾನದ ಮೇಲ್ಕಂಡ ವಲಯಗಳ ಕಾರ್ಮಿಕರು ಫಲಾನುಭವಿಯಾಗಬಹುದಿದ್ದು, 60 ವರ್ಷ ಪೂರೈಸಿದ ನಂತರ ಪಾವತಿಸಿದ ವಂತಿಗೆ ಆಧಾರಿತ ರಾಜ್ಯ ಸರ್ಕಾರದ ಸಮಾನಾಂತರ ವಂತಿಗೆ ಹಾಗೂ ನೌಕರರ ಭವಿಷ್ಯನಿಧಿ ಯೋಜನೆಯಲ್ಲಿ ಕಾಲಾನುಕಾಲಕ್ಕೆ ನಿಗದಿಪಡಿಸಿದ ಬಡ್ಡಿ ಸಮೇತ ಸಂಗ್ರಹವಾದ ಒಟ್ಟು ಮೊತ್ತವನ್ನು / ಮಾಸಿಕ ಪಿಂಚಣಿಯನ್ನು ಪಾವತಿಸಲು ಸಮಗ್ರ ಯೋಜನೆಯನ್ನು ರೂಪಿಸಲು ನಿರ್ಧರಿಸಲಾಗಿದೆ.

ಈ ದಿಸೆಯಲ್ಲಿ, ಯೋಜನೆಯನ್ನು ರೂಪಿಸಲು ಭಾರತೀಯ ಜೀವ ವಿಮಾ ಸಂಸ್ಥೆ (LIC) / UTI / SBI / Private Mutual Funds ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಅಧಿಕಾರಿ / ನೌಕರರ ಸೇವೆಯನ್ನು ಈ ಕೆಳಕಂಡ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ಪಡೆಯಲು ಉದ್ದೇಶಿಸಲಾಗಿದೆ.

(1) ನಿಧಿ ನಿರ್ವಾಹಕರು (Fund Manager) – 1 ಹುದ್ದೆ.

(2) ಸಹಾಯಕ ನಿಧಿ ನಿರ್ವಾಹಕರು – 2 ಹುದ್ದೆ.

(3) ದಾಖಲೆ ನಿರ್ವಾಹಕರು – 3 ಹುದ್ದೆ.

ಇದಲ್ಲದೆ, ಮಂಡಳಿಯು ಜಾರಿಗೊಳಿಸುತ್ತಿರುವ ಎಲ್ಲಾ ಯೋಜನೆಗಳ ಮಾಹಿತಿಯನ್ನು ಗಣಕೀಕರಿಸಿ ಯೋಜನೆಯ ತಾಂತ್ರಿಕ ಸಹಾಯಕ್ಕಾಗಿ

1. IT Consultant - 1 ಹುದ್ದೆ,
2. IT Assistants - 2 ಹುದ್ದೆ ಹಾಗೂ
3. DEO - 11 ಹುದ್ದೆಗಳು (ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಗೆ).

ಇವರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾತ್ರ ಪಡೆಯುವುದು.

## (4) ಪ್ರತಿ ತಾಲ್ಲೂಕಿನಲ್ಲಿ ಕಾರ್ಮಿಕ ಸೇವಾ ಕೇಂದ್ರ (Workers Facilitation Centres) ತೆರೆಯುವುದು

ಮಾನ್ಯ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಪ್ರಕರಣ ಸಂಖ್ಯೆ: 5706/30/0/2014/UC, ದಿನಾಂಕ: 02/02/2018ರ ಆದೇಶದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳು ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆ, 2008ರ ಕಲಂ 3(4)(a) ಯಿಂದ (g) ವರೆಗಿನ ಸೌಲಭ್ಯಗಳನ್ನು ಒಳಗೊಂಡ ಯೋಜನೆಗಳನ್ನು ರೂಪಿಸುವಂತೆ ಮತ್ತು ಸದರಿ ಕಾಯ್ದೆಯ ಕಲಂ 9 ರನ್ವಯ ರಾಜ್ಯ ಸರ್ಕಾರಗಳು ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸುವಂತೆ ಮತ್ತು ಸ್ಮಾರ್ಟ್ ಕಾರ್ಡ್‌ನ್ನು ಸಹ ನೀಡುವಂತೆ ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುವ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ, ರಾಜ್ಯದ ಪ್ರತಿ ತಾಲ್ಲೂಕಿನಲ್ಲಿ ಕಾರ್ಮಿಕ ಸೇವಾ ಕೇಂದ್ರವನ್ನು ತೆರೆಯಲು ನಿರ್ಧರಿಸಲಾಗಿದೆ. ಇದಲ್ಲದೆ, ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ, ಎಲ್ಲಾ 6 ಕಾರ್ಮಿಕ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ತಲಾ ಒಂದರಂತೆ ಕಾರ್ಮಿಕ ಸೇವಾ ಕೇಂದ್ರಗಳನ್ನು ತೆರೆಯಲಾಗುವುದು. ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತೆರೆಯುವ ಒಂದು ಕಾರ್ಮಿಕ ಸೇವಾ ಕೇಂದ್ರವನ್ನು ಮಂಡಳಿಯ ಕಛೇರಿಯ ಆವರಣದಲ್ಲಿ ಸ್ಥಾಪಿಸಲಾಗುವುದು. ಸದರಿ ಕೇಂದ್ರದ ಹೊಣೆಯನ್ನು ಸಂಬಂಧಿಸಿದ ಕಾರ್ಯ ವ್ಯಾಪ್ತಿಯ ಕಾರ್ಮಿಕ ಅಧಿಕಾರಿಯು ಮಂಡಳಿಯ ಕಛೇರಿಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸುವುದು.

ಸದರಿ ಕೇಂದ್ರಗಳಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೇಮಕಗೊಂಡ ಕಾರ್ಮಿಕ ಬಂಧುಗಳು ಸಹ ಕಾರ್ಯನಿರ್ವಹಿಸಬೇಕಾಗಿದ್ದು, ಕಛೇರಿಯ ಕಾರ್ಯನಿರ್ವಹಣೆಗೆ ಅವಶ್ಯಕವುಳ್ಳ ಸ್ಥಳ, ಪೀಠೋಪಕರಣ, ಲೇಖನ ಸಾಮಾಗ್ರಿಗಳು, ದೂರವಾಣಿ ಸಂಪರ್ಕ, ಎಲೆಕ್ಟ್ರಾನಿಕ್ ಉಪಕರಣ ಇತ್ಯಾದಿಗಳನ್ನು ಖರೀದಿಸಲು ಮಂಡಳಿಯ ವತಿಯಿಂದ ಹಣವನ್ನು ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗುತ್ತದೆ. ನಿಗದಿಪಡಿಸಿದ ಮೊತ್ತದ ಮಿತಿಯೊಳಗೆ ಎಲ್ಲಾ ಸಾಮಾಗ್ರಿಗಳನ್ನು ದರಪಟ್ಟಿಯ ಮೂಲಕ ಸ್ಥಳೀಯವಾಗಿ ಖರೀದಿಸಿ ಸೂಕ್ತ ದಾಖಲೆಗಳನ್ನು ಮಂಡಳಿಗೆ ಒದಗಿಸಬೇಕಾಗಿದೆ.

ಇದಲ್ಲದೆ, ಯೋಜನೆಯ ಸಮರ್ಪಕ ಜಾರಿಗಾಗಿ ನಡೆಸುವ ತರಬೇತಿ, ಸಭೆಗಳು, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯುವ ಸಭೆಗಳು ಮುಂತಾದವುಗಳಿಗೆ ತಗಲುವ ಎಲ್ಲಾ ವೆಚ್ಚವನ್ನು ಮಂಡಳಿಯೇ ಭರಿಸಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ಇದರ ಜೊತೆಗೆ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಾರ್ಚ್ 1 ರಂದು ಕಾರ್ಮಿಕ ಸಮ್ಮಾನ ದಿನಾಚರಣೆ ಹಾಗೂ ಕಾರ್ಮಿಕ ದಿನಾಚರಣೆ ಆಚರಿಸಲು ತಗಲಬಹುದಾದ ವೆಚ್ಚವನ್ನು ಮಂಡಳಿಯು ಭರಿಸಲು ಅವಕಾಶ ಕಲ್ಪಿಸಿದೆ.

ಮೇಲಿನ ಎಲ್ಲಾ ಉದ್ದೇಶಗಳಿಗಾಗಿ ರೂ.572.25 ಲಕ್ಷಗಳನ್ನು ಮೀಸಲಿರಿಸಿದ್ದು, ಅವುಗಳ ವಿವರಣೆಯು ಈ ಕೆಳಕಂಡಂತಿದೆ:

| ಉದ್ದೇಶ | ವಿವರಣೆ | ಪ್ರಮಾಣದ ಸಂಖ್ಯೆ | ಅಂದಾಜು ದರ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ.ಗಳಲ್ಲಿ) | ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾದ ಮೊದಲ ಕಂತು (ರೂ.ಗಳಲ್ಲಿ) |
|---|---|---|---|---|---|
| ಪ್ರತಿ ತಾಲ್ಲೂಕಿನಲ್ಲಿ ಕಾರ್ಮಿಕ ಸೇವಾ ಕೇಂದ್ರ (Workers Facilitation Centres) (ಕಛೇರಿಯ ಕಟ್ಟಡ ಬಾಡಿಗೆ, ಪೀಠೋಪಕರಣ, ಕಛೇರಿ ವೆಚ್ಚ ಹಾಗೂ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ತಲುಪಿಸಲು ಕಾರ್ಯಕ್ರಮ ವೆಚ್ಚ) | ಚದರ ಅಡಿಗೆ ರೂ.12 ಮೀರದಂತೆ ಶೌಚಾಲಯ, ನೀರು ಹಾಗೂ ವಿದ್ಯುತ್ ಸರಬರಾಜು ಒಳಗೊಂಡ ಪೀಠೋಪಕರಣ ರಹಿತ ಗರಿಷ್ಠ 350 ಚದರಡಿಯ ಕಟ್ಟಡದ **6** ತಿಂಗಳ ವೆಚ್ಚ.(ಮಾಸಿಕ ರೂ.5,000 ಬಾಡಿಗೆ) | 180 | 30,000 | 54,00,000 | 27,00,000 |
| | ಪೀಠೋಪಕರಣ:– 2 ಮೇಜು, 1 ಕಛೇರಿ ಕುರ್ಚಿ, 20 ಫೈಬರ್ ಕುರ್ಚಿಗಳು ಹಾಗೂ 1 ಬೀರು | 180 | 46,000 | 82,80,000 | 82,80,000 |
| | ದೂರವಾಣಿ ಸಂಪರ್ಕ with 2 MBPS BSNL Internet | 180 | 12,000 | 21,60,000 | 10,80,000 |
| | 1 Laptop, 1 A4 Multifunction B/W Printer, Table Fan & Light Bulbs | 180 | 66,000 | 1,18,80,000 | 1,18,80,000 |
| | ಲೇಖನ ಸಾಮಾಗ್ರಿಗಳು:– ಪ್ರಿಂಟಿಂಗ್ ಪೇಪರ್, ಪೆನ್, ಗೋಡೆ ಗಡಿಯಾರ, 6 ರಿಜಿಸ್ಟರ್‌ಗಳು (ಉಗ್ರಾಣ, ಹಣ, ಮೀಟಿಂಗ್, outreach ಚಟುವಟಿಕೆಗಳು, ಕಾರ್ಯಕ್ರಮದ ವೆಚ್ಚ ಹಾಗೂ ಕಾರ್ಯಕ್ರಮದ ಸಾಮಾಗ್ರಿಗಳು ಇತ್ಯಾದಿಗಳಿಗಾಗಿ | 180 | 6,000 | 10,80,000 | 10,80,000 |
| | ಅವಶ್ಯಕವಿರುವ ಅಂಚೆ ಸ್ಟ್ಯಾಂಪ್, ಲೇಖನ ಸಾಮಾಗ್ರಿಗಳಿಗಾಗಿ ಉಳಿತಾಯದ ಹಣವನ್ನು ಬಳಸಬಹುದು | 180 | 1,800 | 3,24,000 | 81,000 |
| | ನಾಮಫಲಕ (Signage) : 2'X3' ಅಳತೆಯ ಕನ್ನಡದಲ್ಲಿ ಬ್ಯಾನರ್ / ಪೋಸ್ಟರ್‌ಗಳು | 180 | 5,000 | 9,00,000 | 9,00,000 |
| | ಪ್ರತಿ ಕಾರ್ಮಿಕ ನಿರೀಕ್ಷಕರಡಿ ಕಾರ್ಮಿಕ ಬಂಧುಗಳ 24 ತರಬೇತಿ ಕಾರ್ಯಕ್ರಮ ಹಾಗೂ ಪ್ರಗತಿ ಪರಿಶೀಲನಾ ಸಭೆ(ಪ್ರತಿ ಸಭೆಗೆ ರೂ.200/–ವೆಚ್ಚ). | 180 | 4,800 | 8,64,000 | 2,16,000 |

| | | | | |
|---|---|---|---|---|
| ಪ್ರತಿ ತಿಂಗಳು 1 ಸಂಘಟನೆಯ ರಚನೆ ಮಾಡುವುದು ಹಾಗೂ ಸಂಘಟನೆಯ ನಾಯಕನಿಗೆ ಆರೋಗ್ಯ, ಸುರಕ್ಷತೆ, ಕನಿಷ್ಠ ವೇತನ, ಕಾರ್ಮಿಕ ಕಾಯ್ದೆಯ ಬಗ್ಗೆ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಯ ಬಗ್ಗೆ ಹಾಗೂ ಕಾರ್ಮಿಕ ಬಂಧುಗಳ ಮೂಲಕ ಕಾರ್ಮಿಕರ ನೋಂದಣಿಯನ್ನು ಒಳಗೊಂಡಂತೆ ಅರಿವು ಮೂಡಿಸುವುದು. ಕಾರ್ಯಕ್ರಮವನ್ನು ಕಾರ್ಮಿಕ ನಿರೀಕ್ಷಕರು ಮತ್ತು ಈ ವಿಷಯದ ಬಗ್ಗೆ ಖ್ಯಾತ ತಜ್ಞರಿಂದ ಅಥವಾ ಅಸಂಘಟಿತ ವಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳಿಂದ ನಡೆಸುವುದು. (ತಲಾ 10,000 ರೂ.ಗಳ ವೆಚ್ಚದಲ್ಲಿ) | 180 | 60,000 | 1,08,00,000 | 27,00,000 |
| ಅಸಂಘಟಿತ ಕಾರ್ಮಿಕರ ಸಂಘಟನೆಯ ನಾಯಕರಿಗೆ ಮಾಸಿಕ 1 ಅರಿವು ಮತ್ತು ತರಬೇತಿ ಕಾರ್ಯಕ್ರಮ(ರೂ.2,000 ಪ್ರತಿ ಕಾರ್ಯಕ್ರಮಕ್ಕೆ). | 180 | 12,000 | 21,60,000 | 5,40,000 |
| ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಸಂಘಟಿತ ಕಾರ್ಮಿಕರ ಕುಂದು-ಕೊರತೆ ನಿವಾರಣೆಗಾಗಿ ತ್ರೈಮಾಸಿಕ ಸಭೆ (ಪ್ರತಿ ಸಭೆಗೆ 2,000 ರೂ.ಗಳ ವೆಚ್ಚದಲ್ಲಿ). | 180 | 4,000 | 7,20,000 | 1,80,000 |
| ಮೇ ದಿನಾಚರಣೆ ಮತ್ತು ಶ್ರಮ ಸಮ್ಮಾನ ದಿನ ಆಯೋಜಿಸಲು(ಪ್ರತಿ ಸಭೆಗೆ 5,000 ರೂ.ಗಳಂತೆ). | 180 | 10,000 | 18,00,000 | 9,00,000 |
| **ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಸಂಬಂಧಪಟ್ಟಂತೆ** | | | | |
| ಚದರ ಅಡಿಗೆ ರೂ.20 ಮೀರದಂತೆ ಶೌಚಾಲಯ, ನೀರು ಹಾಗೂ ವಿದ್ಯುತ್ ಸರಬರಾಜು ಒಳಗೊಂಡ ಪೀಠೋಪಕರಣ ರಹಿತ ಗರಿಷ್ಠ 750 ಚದರಡಿಯ ಕಟ್ಟಡ (ಬೆಂಗಳೂರಿನ 6 ವಿಭಾಗೀಯ ಕಾರ್ಮಿಕ ಅಧಿಕಾರಿಗಳು, ಉಪ ವಿಭಾಗ 1-6 ರವರೆಗಿನ ವ್ಯಾಪ್ತಿಯೊಳಗೆ 6 ಕಛೇರಿಗಳು)ಗಳಿಗಾಗಿ 6 ತಿಂಗಳ ವೆಚ್ಚ | 6 | 90,000 (6 ತಿಂಗಳಿಗೆ) | 5,40,000 | 2,70,000 |

| | | | | |
|---|---|---|---|---|
| ಪೀಠೋಪಕರಣಗಳು:– 2 ಮೇಜು, 1 ಕಛೇರಿ ಖುರ್ಚಿ, 20 ಫೈಬರ್ ಖುರ್ಚಿಗಳು, 1 ಬೀರು. | 6 | 93,000 - | 5,58,000 | 5,58,000 |
| ದೂರವಾಣಿ ಸಂಪರ್ಕ, 2MBPS BSNL internet | 6 | 16,500 | 99,000 | 49,500 |
| 1 Laptop, ಬಹು ಉದ್ದೇಶಿತ ಬಣ್ಣದ ಪ್ರಿಂಟರ್, ಮೇಜು, ಫ್ಯಾನ್ ಮತ್ತು ಬಲ್ಬ್ | 6 | 1,65,000 | 9,90,000 | 9,90,000 |
| ಲೇಖನ ಸಾಮಾಗ್ರಿಗಳು:– ಪ್ರಿಂಟಿಂಗ್ ಪೇಪರ್, ಪೆನ್, ಗೋಡೆ ಗಡಿಯಾರ, ಕಛೇರಿ ರಿಜಿಸ್ಟರ್, ಕ್ಯಾಷ್ ರಿಜಿಸ್ಟರ್, ಮೀಟಿಂಗ್ ರಿಜಿಸ್ಟರ್, outreach ಚಟುವಟಿಕೆ ನಿರ್ವಹಿಸುವ ರೆಜಿಸ್ಟರ್, ಕಾರ್ಯಕ್ರಮ ನಿರ್ವಹಣಾ ವೆಚ್ಚ ರಿಜಿಸ್ಟರ್, ಕಾರ್ಯಕ್ರಮದ ಸಾಮಾಗ್ರಿಗಳಿಗಾಗಿ | 6 | 24,000 | 1,44,000 | 1,44,000 |
| ಅವಶ್ಯಕವಿರುವ ಅಂಚೆ ಸ್ಟ್ಯಾಂಪ್, ಲೇಖನ ಸಾಮಾಗ್ರಿಗಳಿಗಾಗಿ ಉಳಿತಾಯದ ಹಣವನ್ನು ಬಳಸಬಹುದು..... | 6 | 9,000 | 54,000 | 13,500 |
| ಸಂಕೇತ (Signage) : 2'X3' ಅಳತೆಯ ಕನ್ನಡದಲ್ಲಿ ಬ್ಯಾನರ್ / ಪೋಸ್ಟರ್‌ಗಳು. KSUWSSB ರವರು ಸದರಿ ಸೈನೇಜ್‌ಗಳನ್ನು ನಿರ್ಧರಿಸುವುದು ಮತ್ತು ತಿಳಿಸುವುದು | 6 | 10,000 | 60,000 | 60,000 |
| ಪ್ರತಿ ಕಾರ್ಮಿಕ ಅಧಿಕಾರಿಗಳಡಿ ಕಾರ್ಮಿಕ ಬಂಧುಗಳ 24 ತರಬೇತಿ ಹಾಗೂ ಪ್ರಗತಿ ಪರಿಶೀಲನಾ ಸಭೆ (ಪ್ರತಿ ಸಭೆಗೆ 2,000 ರೂ.ಗಳು) | 6 | 48,000 | 2,88,000 | 72,000 |
| ಪ್ರತಿ ತಿಂಗಳು 1 ಸಂಘಟನೆಯ ರಚನೆ ಮಾಡುವುದು ಹಾಗೂ ಸಂಘಟನೆಯ ನಾಯಕನಿಗೆ ಆರೋಗ್ಯ, ಸುರಕ್ಷತೆ, ಕನಿಷ್ಠ ವೇತನ, ಕಾರ್ಮಿಕ ಕಾಯ್ದೆಯ ಬಗ್ಗೆ ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಯ ಬಗ್ಗೆ ಕಾರ್ಮಿಕ ಬಂಧುಗಳ ಮೂಲಕ ಕಾರ್ಮಿಕರ ನೋಂದಣಿಯನ್ನು ಒಳಗೊಂಡಂತೆ ಅರಿವು ಮೂಡಿಸುವುದು. ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಬಂಧುಗಳು, ಕಾರ್ಮಿಕ ನಿರೀಕ್ಷಕರು | 6 | 3,00,000 | 18,00,000 | 4,50,000 |

| | | | | | |
|---|---|---|---|---|---|
| | ಮತ್ತು ಈ ವಿಷಯದ ಬಗ್ಗೆ ಖ್ಯಾತ ತಜ್ಞರಿಂದ ಅಥವಾ ಅಸಂಘಟಿತ ವಲಯದಲ್ಲಿ ಕೆಲಸನಿರ್ವಹಿಸುತ್ತಿರುವ ಸರ್ಕಾರೇತ್ತರ ಸಂಸ್ಥೆಗಳಿಂದ ನಡೆಸುವುದು. (ಪ್ರತಿ ಕಾರ್ಯಕ್ರಮಕ್ಕೆ 50,000 ರೂ.ಗಳು) | | | | |
| | ಅಸಂಘಟಿತ ಕಾರ್ಮಿಕರ ಸಂಘಟನೆಯ ನಾಯಕರಿಗೆ ಮಾಸಿಕ 1 ಅರಿವು ಮತ್ತು ತರಬೇತಿ ಕಾರ್ಯಕ್ರಮ(ರೂ.2,000 ಪ್ರತಿ ಕಾರ್ಯಕ್ರಮಕ್ಕೆ). | 6 | 45,000 | 2,70,000 | 67,500 |
| | ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಸಂಘಟಿತ ಕಾರ್ಮಿಕರ ಕುಂದು-ಕೊರತೆ ನಿವಾರಣೆಗಾಗಿ ತ್ರೈಮಾಸಿಕ ಪ್ರತಿ ಸಭೆಗೆ 20,000 ರೂ.ಗಳು. | 6 | 20,000 | 1,20,000 | 30,000 |
| | ಮೇ ದಿನಾಚರಣೆ ಮತ್ತು ಶ್ರಮ ಸಮ್ಮಾನ ದಿನ ಆಯೋಜಿಸುವುದು(ಪ್ರತಿ ಕಾರ್ಯಕ್ರಮಕ್ಕೆ 2.00 ಲಕ್ಷ ರೂ.ಗಳಂತೆ). | 6 | 4,00,000 | 24,00,000 | 12,00,000 |
| | **ಒಟ್ಟು ಮೊತ್ತ** | | | **5,36,91,000** | **3,44,41,500** |

ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಅವಶ್ಯಕವುಳ್ಳ ಮೊದಲ ಕಂತಿನ ಅನುದಾನವನ್ನು ಸಂಬಂಧಪಟ್ಟ ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡಲಾಗುವುದು ಹಾಗೂ ಮಂಡಳಿಯು ಜಾರಿಗೊಳಿಸುತ್ತಿರುವ ಎರಡೂ ಯೋಜನೆಗಳ ಜಾರಿಗಾಗಿ ಪ್ರತ್ಯೇಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಖಾತೆ ತೆರೆದು ಮಾಹಿತಿ ನೀಡುವಂತೆ ಈಗಾಗಲೇ ನಿರ್ದೇಶಿಸಲಾಗಿದೆ.

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದ ಬಳಕೆಗೆ ಸಂಬಂಧಪಟ್ಟಂತೆ **ಕರ್ನಾಟಕ ಆರ್ಥಿಕ ಸಂಹಿತೆ, 1958**ರನ್ವಯ, ಈ ಕೆಳಕಂಡ ರಿಜಿಸ್ಟರ್‌ಗಳನ್ನು ನಿರ್ವಹಿಸಬೇಕಾಗಿರುತ್ತದೆ.

1. ನಗದು ಪುಸ್ತಕ
2. ದಾಸ್ತಾನು ರಿಜಿಸ್ಟರ್
3. ಚಟುವಟಿಕೆಗಳ ರಿಜಿಸ್ಟರ್(Activities Register)
4. ಅಸಂಘಟಿತ ಕಾರ್ಮಿಕರ ವರ್ಗವಾರು ನೋಂದಣಿ ರಿಜಿಸ್ಟರ್
5. ಭವಿಷ್ಯನಿಧಿ ವಂತಿಗೆ ರಿಜಿಸ್ಟರ್
6. ವಿವಿಧ ಯೋಜನೆಗಳಡಿ ಬಳಕೆ ಪ್ರಮಾಣಪತ್ರ (Utilization Certificate )

### (5)ಶ್ರಮ ಸಮ್ಮಾನ ಪ್ರಶಸ್ತಿ ಹಾಗೂ ವಿಶೇಷ ಪುರಸ್ಕಾರ

2018-19ನೇ ಸಾಲಿನ ಆಯವ್ಯದಲ್ಲಿ, "ಅಸಂಘಟಿತ ಕಾರ್ಮಿಕರನ್ನು ಕೇಂದ್ರವ್ವಾಗಿಟ್ಟುಕೊಂಡು, ಮಾರ್ಚ್ 1 ರಂದು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಮಿಕ ಸಮ್ಮಾನ ದಿನ ಆಚರಣೆ ಮಾಡಲು ಹಾಗೂ ಅಸಂಘಟಿತ ವಲಯದಲ್ಲಿ ವಿಶೇಷ ಸಾಧನೆ ಮಾಡಿದ ಕಾರ್ಮಿಕರಿಗೆ ಕಾರ್ಮಿಕರ ಸಮ್ಮಾನ ಪ್ರಶಸ್ತಿ ನೀಡುವುದಾಗಿ" ಘೋಷಿಸಿದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಕಾಇ 467 ಎಲ್ಇಟಿ 2017, ದಿನಾಂಕ:24-09-2018ರನ್ವಯ ಆದೇಶ ಹೊರಡಿಸಿದೆ.

ಸದರಿ ಆದೇಶದನ್ವಯ, ಶ್ರಮ ಸಮ್ಮಾನ ಪ್ರಶಸ್ತಿ ಹಾಗೂ ವಿಶೇಷ ಪುರಸ್ಕಾರಗಳನ್ನು ನೀಡಬೇಕಾಗಿದ್ದು, ಪ್ರಶಸ್ತಿಗೆ ಆಯ್ಕೆ ಮಾಡಬೇಕಾದ ಮಾರ್ಗಸೂಚಿಗಳನ್ನು, ನಡೆಸಬೇಕಾದ ಜಿಲ್ಲಾ ಮಟ್ಟದ ತ್ರಿಪಕ್ಷೀಯ ಸಭೆ, ಮಾಸಿಕ ಸಭೆ, ಕಾರ್ಮಿಕ ಸ್ಪಂದನ ಸಭೆ ಇತ್ಯಾದಿಗಳ ಕುರಿತು ವಿವರವಾದ ಮಾಹಿತಿಯನ್ನು ನೀಡಲಾಗಿದ್ದು ಸಂಬಂಧಪಟ್ಟ ಎಲ್ಲಾ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ಕಳುಹಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ, ಮೇಲಿನ ಸರ್ಕಾರಿ ಆದೇಶದಲ್ಲಿ ಮಂಡಳಿಗೆ ಸಂಬಂಧಿಸಿದಂತೆ ನಮೂದಿಸಿದ ಹಮಾಲರು, ಟೈಲರ್‌ಗಳು, ಚಿಂದಿ ಆಯುವ 3 ವರ್ಗಗಳಲ್ಲದೆ ಮಂಡಳಿಯು ಸ್ಮಾರ್ಟ್ ಕಾರ್ಡ್ ನೀಡಲು ಉದ್ದೇಶಿಸಿರುವ ಇತರೆ 8 ವರ್ಗಗಳಾದ ಗೃಹ ಕಾರ್ಮಿಕರು, ಮೆಕ್ಯಾನಿಕ್‌ಗಳು, ಅಗಸರು, ಕಮ್ಮಾರರು, ಕುಂಬಾರರು, ಕ್ಷೌರಿಕರು, ಅಕ್ಕಸಾಲಿಗರು ಹಾಗೂ ಭಟ್ಟಿ ಕಾರ್ಮಿಕರಿಗೂ ಸಹ ಶ್ರಮ ಸಮ್ಮಾನ ಪ್ರಶಸ್ತಿ ಹಾಗೂ ವಿಶೇಷ ಪುರಸ್ಕಾರಗಳನ್ನು ನೀಡುವುದು ಸೂಕ್ತವೆಂದು ಪರಿಗಣಿಸಲಾಗಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಈ ಕೆಳಕಂಡಂತೆ ಅನುದಾನವನ್ನು ಬಳಸಿಕೊಳ್ಳಲು ಉದ್ದೇಶಿಲಾಗಿದೆ.

| ಉದ್ದೇಶ | ವಿವರಣೆ | ಪ್ರಮಾಣದ ಸಂಖ್ಯೆ | ಅಂದಾಜು ದರ (ರೂ.ಗಳಲ್ಲಿ) | ಅಂದಾಜು ಮೊತ್ತ (ರೂ.ಗಳಲ್ಲಿ) | ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾದ ಮೊದಲ ಕಂತು | ಕಾರ್ಮಿಕ ಅಧಿಕಾರಿಗಳಿಗೆ ಬಿಡುಗಡೆ ಮಾಡಬೇಕಾದ ಮೊದಲ ಕಂತು | ಮಂಡಳಿಯಿಂದ ಟೆಂಡರ್ ಮುಖಾಂತರ |
|---|---|---|---|---|---|---|---|
| ಪ್ರತಿ ಜಿಲ್ಲೆಗೆ ಚಾಲಕರನ್ನು ಹೊರತುಪಡಿಸಿ ಉತ್ತಮ ಅಸಂಘಟಿತ ಕಾರ್ಮಿಕರಿಗೆ ರೂ.10,000 /-ಗಳ ನಗದು ಪುರಸ್ಕಾರ | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಗೃಹ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಚಿಂದಿ ಆಯುವ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಹಮಾಲಿ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಕ್ಷೌರಿಕ ಕಾರ್ಮಿಕರಿಗೆ ರೂ.10,000/-ಗಳ ನಗದು | 30 | 10,000 | 3,00,000 | 1,50,000 | | |

| | | | | | | | |
|---|---|---|---|---|---|---|---|
| | ಪುರಸ್ಕಾರ | | | | | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಮೆಕ್ಯಾನಿಕ್ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಕಮ್ಮಾರರು ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಕುಂಬಾರರು ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಅಕ್ಕಸಾಲಿಗ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಟೈಲರ್ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ಮಂಡಕ್ಕಿ ಭಟ್ಟಿ ಕಾರ್ಮಿಕರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ ವೃತ್ತಿನಿರತ ಅಗಸರಿಗೆ ರೂ.10,000/-ಗಳ ನಗದು ಪುರಸ್ಕಾರ | 30 | 10,000 | 3,00,000 | 1,50,000 | | |
| ಪ್ರತಿ ಜಿಲ್ಲೆಗೆ ಚಾಲಕರನ್ನು ಹೊರತುಪಡಿಸಿ 10 ಉತ್ತಮ ಅಸಂಘಟಿತ ಕಾರ್ಮಿಕರಿಗೆ ರೂ.1,000/- ಗಳ ನಗದು ಪುರಸ್ಕಾರ | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಗೃಹ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಚಿಂದಿ ಆಯುವವರು ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |

| | | | | | | | |
|---|---|---|---|---|---|---|---|
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಹಮಾಲಿ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಕ್ಷೌರಿಕ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಮೆಕ್ಯಾನಿಕ್ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಕಮ್ಮಾರ ವೃತ್ತಿಯ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಕುಂಬಾರ ವೃತ್ತಿಯ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಅಕ್ಕಸಾಲಿಗ ವೃತ್ತಿಯ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಟೈಲರ್ ವೃತ್ತಿಯ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ಮಂಡಕ್ಕಿ ಭಟ್ಟಿ ವೃತ್ತಿಯ ಕಾರ್ಮಿಕರಿಗೆ ರೂ.1,000/-ಗಳ ನಗದು ಪುರಸ್ಕಾರ | 300 | 1,000 | 3,00,000 | 1,50,000 | | |
| | ಉತ್ತಮ ಸೇವೆ ಸಲ್ಲಿಸಿರುವ ನೋಂದಾಯಿತ 10 ವೃತ್ತಿನಿರತ ಅಗಸರಿಗೆ | 300 | 1,000 | 3,00,000 | 1,50,000 | | |

| | | | | | | | |
|---|---|---|---|---|---|---|---|
| | ರೂ.1,000/-ಗಳ ನಗದು ಪುರಸ್ಕಾರ | | | | | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಗೃಹ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಚಿಂದಿ ಆಯುವ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಹಮಾಲಿ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| ಪ್ರತಿ ಜಿಲ್ಲೆಯಲ್ಲಿ ಚಾಲಕರನ್ನು ಹೊರತುಪಡಿಸಿ ಉತ್ತಮ ಸೇವೆ ಸಲ್ಲಿಸಿರುವ 31 ಅಸಂಘಟಿತ ಕಾರ್ಮಿಕರಿಗೆ ರೂ.1,050/-ಗಳ ವೆಚ್ಚದಲ್ಲಿ ಸ್ಮರಣಿಕೆ ಮತ್ತು ಪ್ರಮಾಣ ಪತ್ರ | ಪ್ರತಿ ಜಿಲ್ಲೆಯ ನೊಂದಾಯಿತ 11 ಕ್ಷೌರಿಕ ವೃತ್ತಿಯ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಮೆಕ್ಯಾನಿಕ್ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಕಮ್ಮಾರ ವೃತ್ತಿಯ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಕುಂಬಾರ ವೃತ್ತಿಯ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಅಕ್ಕ ಸಾಲಿಗ ವೃತ್ತಿಯ ಕಾರ್ಮಿಕರಿಗೆ ನೀಡುವ ~~ಸ್ಮರಣಿಕೆ~~ ಹಾಗೂ ಶ್ರಮ | 330 | 1,050 | 3,46,500 | 1,73,250 | | |

| | | | | | | | |
|---|---|---|---|---|---|---|---|
| | ಸಮ್ಮಾನ ಪ್ರಮಾಣ ಪತ್ರ | | | | | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಟೈಲರ್ ವೃತ್ತಿಯ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ಮಂಡಕ್ಕಿ ಭಟ್ಟಿ ವೃತ್ತಿಯ ಕಾರ್ಮಿಕರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| | ಪ್ರತಿ ಜಿಲ್ಲೆಯ ನೊಂದಾಯಿತ 11 ವೃತ್ತಿನಿರತ ಅಗಸರಿಗೆ ನೀಡುವ ಸ್ಮರಣಿಕೆ ಹಾಗೂ ಶ್ರಮ ಸಮ್ಮಾನ ಪ್ರಮಾಣ ಪತ್ರ | 330 | 1,050 | 3,46,500 | 1,73,250 | | |
| ಕಾರ್ಮಿಕ ಬಂಧು ಕಮಿಷನ್ ರೂ.200/–ರ ದರದಲ್ಲಿ | ಕಾರ್ಮಿಕ ಬಂಧುವಿಗೆ ರೂ.200/–ರ ದರದಲ್ಲಿ ಕಮಿಷನ್(ಶಿಫಾರಸ್ಸಿನ ಮೇಲೆ ಆಯ್ಕೆಯಾದ ಅಸಂಘಟಿತ ಕಾರ್ಮಿಕರ ಸಂಖ್ಯೆಯ ಆಧಾರದ ಮೇಲೆ) | 3300 | 200 | 6,60,000 | | 3,30,000 | |
| ಶ್ರಮ ಸನ್ಮಾನದ ಅರ್ಜಿ ನಮೂನೆ, ಪ್ರಚಾರ ಚಟುವಟಿಕೆ, ಪ್ಯಾಕೆಟ್ ಕ್ಯಾಲೆಂಡರ್ ಮತ್ತು ಕರಪತ್ರಕ್ಕಾಗಿ | ಪ್ರತಿ ಜಿಲ್ಲೆಗೆ 5,000 ಶ್ರಮ ಸನ್ಮಾನದ ಪುರಸ್ಕಾರದ ಅರ್ಜಿ | 1,50,000 | 2 | 3,00,000 | | | 3,00,000 |
| | ಪ್ರತಿ ಜಿಲ್ಲೆಗೆ 5,000 ಪ್ಯಾಕೆಟ್ ಕ್ಯಾಲೆಂಡರ್ | 1,50,000 | 8 | 12,00,000 | | | 12,00,000 |
| | ಪ್ರತಿ ಜಿಲ್ಲೆಗೆ ಕಾರ್ಮಿಕ ಇಲಾಖೆಯ ಯೋಜನೆಯ 5,000 ಕರಪತ್ರ | 1,50,000 | 2 | 3,00,000 | | | 3,00,000 |
| | ಪ್ರತಿ ಜಿಲ್ಲೆಗೆ ಮಂಡಳಿಯ ಯೋಜನೆ 5,000 ಬ್ರೋಚರ್ | 1,50,000 | 5 | 7,50,000 | | | 7,50,000 |
| | ಜಿಲ್ಲಾ ಮಟ್ಟದ ಸಮಾರಂಭದ ಚಟುವಟಿಕೆಗಳ ವೆಚ್ಚ, ಜಿಲ್ಲಾ ಸಮಿತಿಗೆ ನೀಡಬೇಕಾದ ಮೊತ್ತ (ಸ.ಆ.ಸಂ: ಕಾಇ 467 ಎಲ್ಇಟಿ 2017 ದಿ:24–09–2018 ರನ್ವಯ) | 30 | 1,00,000 | 30,00,000 | 15,00,000 | | |
| | **ಒಟ್ಟು** | | | **1,66,21,500** | **67,05,750** | **3,30,000** | **25,50,000** |

ಶ್ರಮ ಸಮ್ಮಾನ ಪ್ರಶಸ್ತಿ / ವಿಶೇಷ ಪುರಸ್ಕಾರ ನೀಡುವ ಸಲುವಾಗಿ ವಿಶೇಷ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಆಯ್ಕೆ ಮಾಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ತ್ರಿಪಕ್ಷೀಯ ನಿರ್ವಹಣಾ ಸಮಿತಿಯನ್ನು ರಚಿಸಲು ಈಗಾಗಲೇ ಸರ್ಕಾರಿ ಆದೇಶ ಸಂಖ್ಯೆ: ಕಾಇ 467 ಎಲ್ಇಟಿ 2017, ದಿನಾಂಕ:24-09-2018ರನ್ವಯ ಆದೇಶ ಹೊರಡಿಸಲಾಗಿದೆ. ಸದರಿ ಆದೇಶದ ಪ್ರತಿಗಳನ್ನು ಎಲ್ಲಾ ಜಿಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ರವಾನಿಸಲಾಗಿದ್ದು, ಮಾನ್ಯ ಜಿಲ್ಲಾಧಿಕಾರಿಗಳೊಡನೆ ಚರ್ಚಿಸಿ ಶೀಘ್ರವಾಗಿ ಜಿಲ್ಲಾ ಮಟ್ಟದ ತ್ರಿಪಕ್ಷೀಯ ನಿರ್ವಹಣಾ ಸಮಿತಿಯನ್ನು ರಚಿಸಲು ಸೂಚಿಸಲಾಗಿದೆ.

ಸದರಿ ಸಮಿತಿಯು ಅಸಂಘಟಿತ ಕಾರ್ಮಿಕರ ನೋಂದಣಿ ಹಾಗೂ ನವೀಕರಣ, ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ, ಪ್ರಚಾರ ಚಟುವಟಿಕೆ, ಕುಂದು ಕೊರತೆ ನಿವಾರಣೆ ಸಭೆ ನಡೆಸುವುದು, ಕಾರ್ಮಿಕ ಬಂಧುಗಳ ಮೇಲ್ವಿಚಾರಣೆ ಮತ್ತು ಇತರೆ ಅಂಶಗಳನ್ನು ಕುರಿತು ಸಭೆ ನಡೆಸಬೇಕಾಗಿರುತ್ತದೆ. ಇದಲ್ಲದೆ, ತ್ರೈಮಾಸಿಕ ಕಾರ್ಮಿಕ ಸ್ಪಂದನ ಸಭೆಗಳನ್ನು ನಡೆಸಿ ಅಸಂಘಟಿತ ಕಾರ್ಮಿಕರ ಕುಂದು ಕೊರತೆ ನಿವಾರಿಸಬೇಕಾಗಿರುತ್ತದೆ. ಈ ಎಲ್ಲಾ ಚಟುವಟಿಕೆಗಳಿಗೆ ಜಿಲ್ಲಾ ಮಟ್ಟದ ತ್ರಿಪಕ್ಷೀಯ ನಿರ್ವಹಣಾ ಸಮಿತಿಯ ಕಾರ್ಯಚಟುವಟಿಕೆಗಳಿಗಾಗಿ ವಾರ್ಷಿಕ 1 ಲಕ್ಷ ರೂ.ಗಳ ಅನುದಾನ ನೀಡಲು ಸರ್ಕಾರಿ ಆದೇಶ ಹೊರಡಿಸಲಾಗಿದೆ.

ಕಾರ್ಮಿಕ ಬಂಧುಗಳು ಮೇಲ್ಕಂಡ ಪ್ರಶಸ್ತಿ / ಪುರಸ್ಕಾರಕ್ಕೆ ಶಿಫಾರಸ್ಸು ಮಾಡಿದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಲ್ಲಿ, ಪ್ರತಿ ಪ್ರಶಸ್ತಿ / ಪುರಸ್ಕಾರಕ್ಕೆ ರೂ.200 ರ ದರದಲ್ಲಿ ಕಮಿಷನ್ ನೀಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಕಾರ್ಯಕ್ಕಾಗಿ ಕಮಿಷನ್ ಪಡೆಯಲು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸಬೇಕಾಗಿದೆ **(ನಮೂನೆ ಲಗತ್ತಿಸಿದೆ)**.

ಶ್ರಮ ಸಮ್ಮಾನ / ವಿಶೇಷ ಪುರಸ್ಕಾರಕ್ಕಾಗಿ ಅರ್ಜಿದಾರರು ಸಲ್ಲಿಸಬೇಕಾದ ನಮೂನೆ **(ನಮೂನೆ ಲಗತ್ತಿಸಿದೆ)** ಮತ್ತು ಕಾರ್ಮಿಕ ಅಧಿಕಾರಿಗಳು ನಿರ್ವಹಿಸಬೇಕಾದ ಮೌಲ್ಯಮಾಪನ ನಮೂನೆಯನ್ನು ಮಂಡಳಿಯಿಂದ ರೂಪಿಸಲಾಗಿದೆ **(ನಮೂನೆ ಲಗತ್ತಿಸಿದೆ)**. ಶ್ರಮ ಸಮ್ಮಾನ / ವಿಶೇಷ ಪುರಸ್ಕಾರ ಪಡೆದ ಎಲ್ಲಾ ಫಲಾನುಭವಿಗಳ ವಿವರವನ್ನು ಮತ್ತು ಈ ಸಂಬಂಧ ಖರ್ಚಾದ ಮೊತ್ತದ ವಿವರವನ್ನು ಮಂಡಳಿಗೆ ಮಾರ್ಚ್ 15 ರ ಒಳಗೆ ಎಲ್ಲಾ ಕಾರ್ಮಿಕ ಅಧಿಕಾರಿಗಳು ವರದಿಯನ್ನು ಸಲ್ಲಿಸಬೇಕಾಗುತ್ತದೆ.

### (6) ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಆಡಳಿತಾತ್ಮಕ ವೆಚ್ಚ

ಬಾಕಿ ಉಳಿದ ಅನುದಾನದಲ್ಲಿ **ರೂ.178.2 ಲಕ್ಷಗಳನ್ನು** ಮಂಡಳಿಯ ಕಾರ್ಯನಿರ್ವಹಣೆಗಾಗಿ ನೇಮಕಗೊಂಡ ಅಧಿಕಾರಿಗಳ / ಸಿಬ್ಬಂದಿಗಳ ವೇತನ, ಪ್ರವಾಸ ಭತ್ಯೆ, ವಾಹನಗಳ ಇಂಧನ ವೆಚ್ಚ, ಕಛೇರಿಯ ಬಾಡಿಗೆ, ವಿದ್ಯುತ್‌ಶಕ್ತಿ, ನೀರು ಸರಬರಾಜು, ದೂರವಾಣಿ ವೆಚ್ಚ, ಅಂಚೆ ವೆಚ್ಚ, ಲೇಖನ ಸಾಮಾಗ್ರಿ ವೆಚ್ಚ, ಉಪಕರಣಗಳ ದುರಸ್ಥಿ ಹಾಗೂ ವಾರ್ಷಿಕ ನಿರ್ವಹಣೆ ವೆಚ್ಚ, ಮಂಡಳಿಯ ಸಾಮಾನ್ಯ ಸಭೆ ಹಾಗೂ ಇತರೆ ಸಭೆ ಇತ್ಯಾದಿಗಳ ಕುರಿತು ಬಳಸಿಕೊಳ್ಳಲಾಗುವುದು.

ಈ ಕ್ರಿಯಾ ಯೋಜನೆಯಡಿ ಕಾರ್ಮಿಕ ಅಧಿಕಾರಿ/ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ಬಂಧುಗಳು ನಿರ್ವಹಿಸಬೇಕಾದ ಅರ್ಜಿ/ರಿಜಿಸ್ಟರ್/ದಾಖಲೆಗಳ ಈ ಕೆಳಕಂಡ ನಮೂನೆಗಳನ್ನು ಇದರೊಂದಿಗೆ ಲಗತ್ತಿಸಿದೆ.

1. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಸಲ್ಲಿಸಬೇಕಾದ ಸ್ವಯಂಘೋಷಿತ ಅರ್ಜಿ ನಮೂನೆ.
   (ಫಲಾನುಭವಿಯು ಸ್ಮಾರ್ಟ್ ಕಾರ್ಡ್ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ)
2. ಫಲಾನುಭವಿಯನ್ನು ನೋಂದಣಿ ಮಾಡಿ ಆ ಸಂಬಂಧ ಪ್ರತಿ ಅರ್ಜಿಗೆ ಪಡೆಯುವ ಕಮಿಷನ್ ಸಲುವಾಗಿ ಸಲ್ಲಿಸುವ ಕಾರ್ಮಿಕ ಭಂಧುಗಳ ಅರ್ಜಿ ನಮೂನೆ (ಕಾರ್ಮಿಕ ಬಂಧು ಪ್ರತಿ ಫಲಾನುಭವಿಯ ನೋಂದಣಿಗಾಗಿ ಕಮಿಷನ್ ಪಡೆಯಲು ಸಲ್ಲಿಸಬೇಕಾದ ಅರ್ಜಿ ನಮೂನೆ)
   - ಅಪಘಾತ ಪರಿಹಾರ ವಿತರಣೆ
3. ಭವಿಷ್ಯನಿಧಿ ಯೋಜನೆಯಡಿ ವಂತಿಕೆ ಸಂಗ್ರಹಣೆಗಾಗಿ ಪಡೆಯುವ ಕಮಿಷನ್‌ಗಾಗಿ ಕಾರ್ಮಿಕ ಬಂಧುಗಳು ಸಲ್ಲಿಸುವ ಅರ್ಜಿ ನಮೂನೆ
4. ನಗದು ಪುಸ್ತಕ
   - ಸ್ವೀಕೃತಿ ಮತ್ತು ಪಾವತಿ
5. ಚಟುವಟಿಕೆ ರಿಜಿಸ್ಟರ್‌ಗಳು(Activities Register)
   - ಕಾರ್ಮಿಕ ಬಂಧುಗಳ ತರಬೇತಿ ಮತ್ತು ಪರಿಶೀಲನಾ ಸಭೆ
   - ಸಂಘಟನೆಯ ರಚನೆ ಮತ್ತು ಸಂಘಟನೆಯ ನಾಯಕನಿಗೆ ಆರೋಗ್ಯ ಸುರಕ್ಷತೆ, ಕನಿಷ್ಠ ವೇತನ, ಕಾರ್ಮಿಕ ಕಾಯ್ದೆಗಳ ಬಗ್ಗೆ ಮತ್ತು ಕ.ರಾ.ಅ.ಕಾ.ಸಾ.ಭ.ಮಂಡಳಿಯ ಯೋಜನೆಯ ಬಗ್ಗೆ ಕಾರ್ಮಿಕ ಬಂಧುಗಳ ಮೂಲಕ ನೋಂದಣಿಯನ್ನು ಒಳಗೊಂಡಂತೆ ಕಾರ್ಮಿಕ ನಿರೀಕ್ಷಕರು ಮತ್ತು ಖ್ಯಾತ ತಜ್ಞರಿಂದ / ಸರ್ಕಾರೇತ್ತರ ಸಂಸ್ಥೆಗಳಿಂದ ತರಬೇತಿ
   - ಅಸಂಘಟಿತ ಕಾರ್ಮಿಕ ಗುಂಪುಗಳ ನಾಯಕರಿಗೆ ಜಾಗೃತಿ ಮತ್ತು ತರಬೇತಿ ಕಾರ್ಯಕ್ರಮ
   - ಅಸಂಘಟಿತ ಕಾರ್ಮಿಕರ ದೂರುಗಳ ನಿವಾರಣೆಗೆ ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ನಡೆದ ತ್ರೈಮಾಸಿಕ ಸಭೆ
   - ಮೇ ದಿನಾಚರಣೆ ಮತ್ತು ಶ್ರಮಸಮ್ಮಾನ ದಿನಾಚರಣೆ
6. ಬಳಕೆ ಪ್ರಮಾಣಪತ್ರ (Utilization Certificate )
7. ಶ್ರಮ ಸಮ್ಮಾನ / ವಿಶೇಷ ಪುರಸ್ಕಾರಕ್ಕಾಗಿ ಶಿಫಾರಸ್ಸು ಮಾಡಿರುವ ಪ್ರಕರಣಗಳಲ್ಲಿ ಪಡೆಯುವ ಕಮಿಷನ್‌ಗಾಗಿ ಕಾರ್ಮಿಕ ಬಂಧುಗಳು ಸಲ್ಲಿಸುವ ಅರ್ಜಿ ನಮೂನೆ
8. ಶ್ರಮ ಸಮ್ಮಾನ ಅರ್ಜಿ ನಮೂನೆ
9. ಬಾಡಿಗೆ ಪ್ರಮಾಣಪತ್ರ
10. ಕಾರ್ಮಿಕ ಅಧಿಕಾರಿಗಳು ನಿರ್ವಹಿಸಬೇಕಾದ ಮೌಲ್ಯಮಾಪನ ನಮೂನೆ.
11. ದಾಸ್ತಾನು ರಿಜಿಸ್ಟರ್
12. ಅಸಂಘಟಿತ ಕಾರ್ಮಿಕರ ವರ್ಗವಾರು ನೋಂದಣಿ ರಿಜಿಸ್ಟರ್
13. ಭವಿಷ್ಯನಿಧಿ ವಂತಿಗೆ ರಿಜಿಸ್ಟರ್

# ಬಳಕೆ ಪ್ರಮಾಣಪತ್ರದ ನಮೂನೆ

______________________________ಪತ್ರ/ಆದೇಶ ಸಂಖ್ಯೆ____________________________

ದಿನಾಂಕ:______________ ಮೇರೆಗೆ ____________ಸಾಲಿನಲ್ಲಿ ______________________ ಖಾತೆಗೆ ಹಂಚಿಕೆಯಾದ/ಬಿಡುಗಡೆಯಾದ ರೂ.___________ ಹಾಗೂ ಕಳೆದ ಸಾಲಿನಲ್ಲಿ ಬಳಕೆಯಾಗದೇ ಉಳಿದ ಮೊತ್ತ ರೂ.____________(ಒಟ್ಟು ರೂ.__________) ಮೊತ್ತದಲ್ಲಿ _______________ಉದ್ದೇಶಕ್ಕಾಗಿ ರೂ______________ಮೊತ್ತವನ್ನು ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿದೆ ಹಾಗೂ ________________ರ ಅಂತ್ಯಕ್ಕೆ ಬಳಕೆಯಾಗದೇ ಉಳಿದ ಮೊತ್ತ ರೂ.____________ಮೊತ್ತವನ್ನು ________________________________________ಖಾತೆಗೆ ಅಧ್ಯರ್ಪಿಸಿದೆ/ಮುಂದಿನ ಸಾಲಿನ ಅನುದಾನಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

ತಪಾಸಣೆಯ ಪ್ರಕಾರಗಳು / ವಿಧಗಳು

1

2

3

ಸಹಿ :
ಹುದ್ದೆ :
ದಿನಾಂಕ:

ಅನುದಾನವನ್ನು ಮಂಜೂರು ಮಾಡಿದ ಉದ್ದೇಶಗಳಿಗಾಗಿಯೇ ಬಳಸಿಕೊಳ್ಳಲಾಗಿದೆ ಎಂದು ನಾನು ತೃಪ್ತಿ ಹೊಂದಿದ್ದೇನೆ.

ಮೇಲುರುಜು :
ಹುದ್ದೆ :
ದಿನಾಂಕ :

ಬಾಡಿಗೆ ಪ್ರಮಾಣ ಪತ್ರ

ನಮೂನೆ 10

(ವಿಷಯ ಸಂಖ್ಯೆ 46 ನಿಯಮ 55)

# Rental Certificate

**FORM 10**

**(Item No 46 Rule 55)**

20___ ರಿಂದ 20____ ಸಾಲಿನ ಬಾಡಿಗೆ ಪ್ರಮಾಣ ಪತ್ರ ( ಸಾರ್ವಜನಿಕ ಉಪಯೋಗಕ್ಕಾಗಿ ಖಾಸಗಿ ಕಟ್ಟಡ ಬಾಡಿಗೆ ಪಡೆದಿದ್ದಲ್ಲಿ)

Rental Certificate for the year 20----------20----------- (for hiring private building for public purposes)

| | |
|---|---|
| 1. ಖಾಸಗಿ ಕಟ್ಟಡವನ್ನು ಉಪಯೋಸುತ್ತಿರುವ ಇಲಾಖೆಯ ಹೆಸರು ಮತ್ತು ವಿಳಾಸ<br>1. Name of the office Department occupying the building and address | |
| 2.ಉಪಯೋಗಿಸುತ್ತಿರುವ ಸ್ಥಳದ ವಿವರ<br>2. Area occupied: | |
| (i) ಕಟ್ಟಡದ ಹೊರವಿಸ್ತೀರ್ಣ<br>(i) Plinth of the building | |
| (ii) ಕಟ್ಟಡದ ಹೊರಗೆ ಇರುವ ಖಾಲಿ ಸ್ಥಳದ ವಿಸ್ತೀರ್ಣ<br>(ii) Open area outside the building | |
| 3. ಕಟ್ಟಡದ ಮಾಲೀಕತ್ವ<br>3. Ownership of the building | |
| ಹೆಸರು ಮತ್ತು ವಿಳಾಸ<br>Name and address | |
| 4. ಮಾಸಿಕ ರೂ.______ ಕಟ್ಟಡದ ಬಾಡಿಗೆಯನ್ನು 20____20____ ಸಾಲಿಗೆ ನಿಗದಿಪಡಿಸಿದೆ<br>4. Rent fixed for building for the Rs------------ per month Year 20........20......(Rupees.............only) | |
| ಉದ್ದೇಶಿತ ಸ್ಥಳಕ್ಕೆ ಯಾವುದೇ ಸಾರ್ವಜನಿಕ ಕಟ್ಟಡದಲ್ಲಿ ಸೂಕ್ತವಾದ ಸ್ಥಳ ಇರಲಿಲ್ಲವೆಂದು ಹಾಗೂ ನಿಗದಿಪಡಿಸಿರುವ ಬಾಡಿಗೆ ಸಮಂಜಸವಾಗಿದೆ ಎಂದು ಪ್ರಮಾಣಿಕರಿಸಲಾಗಿದೆ.<br>Certified that a suitable public building is not available for the purpose required and the rent fixed is reasonable. | |
| | |
| ಪ್ರಮಾಣಿಕರಿಸಿದ ಅಧಿಕಾರಿಯ ಸಹಿ ಮತ್ತು ಹುದ್ದೆ.<br>Signature of the certifying authority & Designation | |
| ಸ್ಥಳ_____<br>Place--------- | |
| ದಿನಾಂಕ_____<br>Date-------- | |
| | |